ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) : "1990ರ ಕರ್ನಾಟಕ ಇನಾಮುಗಳ ರದ್ದಿಯಾತಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ"

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "1990ರ ಕರ್ನಾಟಕ ಇನಾಮುಗಳ ರದ್ದಿಯಾತಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

1990ನೇ ಇಸವಿಯ ಕರ್ನಾಟಕ ಹಿಡುವಳಿಗಳ ತುಂಡೀಕರಣ ನಿರೋಧ ಮತ್ತು ಸಂಯೋಜನಾ (ನಿರಸನ) ವಿಧೇಯ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, 1990ನೇ ಇಸವಿಯ ಕರ್ನಾಟಕ ಹಿಡುವಳಿಗಳ ತುಂಡೀಕರಣ ನಿರೋಧ ಮತ್ತು ಸಂಯೋಜನ (ನಿರಸನ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ"

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಮಾನ್ಯ ಅಧ್ಯಕ್ಷರೆ, ಈ ವಿಧೇಯಕದಲ್ಲಿ ಹೇಳತಕ್ಕಂಥ ವಿಶೇಷಗಳು ಏನೂ ಇಲ್ಲ ಎಂದು ಭಾವಿಸುತ್ತೇನ. ಈ ವಿಚಾರವು ಎಲ್ಲರಿಗೂ ತಿಳಿದಿರುವುದೇ ಆಗಿರುತ್ತದೆ. ಈಗ ನಾವು ಈ ಒಂದು ಕರ್ನಾಟಕ ಹಿಡುವಳಿಗಳ ತುಂಡೀಕರಣ ವಿಧೇಯಕವನ್ನು ರಿಪೀಲ್ ಮಾಡುತ್ತಾ ಇದ್ದೇವೆ. ಇದರಿಂದ ಅನೇಕ ರೈತರುಗಳಿಗೆ ಅನುಕೂಲವಾಗುತ್ತದೆ. ಇಲ್ಲಿಯವರೆಗೆ ಅದನ್ನು ಕನ್ಸಾಲಿಡೇಟ್ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಮೊದಲು ತಂದರು. ಆದರೆ ಅದರಿಂದ ಅನುಕೂಲಕ್ಕಿಂತ ಅನಾನುಕೂಲವೇ ಜಾಸ್ತಿಯಾಯಿತು. ಆದುದರಿಂದ ಆ ಬಗ್ಗೆ ಅನೇಕ ಮನವಿಗಳು ಶಾಸಕರಿಂದ ಮತ್ತು ರೈತಬಾಂಧವರಿಂದ ಬಂದುವು. ಆದ್ದರಿಂದ ಅದನ್ನು ಪರಿಗಣಿಸಿ ಈ ಒಂದು ಕಾನುನನ್ನು ರಿಪೀಲ್ ಮಾಡುತ್ತಿದ್ದೇವೆ. ದಯಮಾಡಿ ಈ ಪರ್ಯಾಲೋಚನ ಪ್ರಸ್ತಾವವನ್ನು ಒಪ್ಪಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ "1990ನೇ ಇಸವಿಯ ಕರ್ನಾಟಕ ಹಿಡುವಳಿಗಳ ತುಂಡೀಕರಣ ನಿರೋಧ ಮತ್ತು ಸಂಯೋಜನ (ನಿರಸನ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು : ಎರಡನೆ ಖಂಡವು ಈ ವಿಧೇಯಕದ ಅಂಗವಾಗಿರುತ್ತದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 1 ಇತ್ಯಾದಿ (2ನೇ ಖಂಡ ವಿಧೇಯಕದ ಅಂಗವಾಯಿತು)

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೆ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : "1990ನೇ ಇಸವಿಯ ಕರ್ನಾಟಕ ಹಿಡುವಳಿಗಳ ತುಂಡೀಕರಣ ನಿರೋಧ ಮತ್ತು ಸಂಯೋಜನಾ (ನಿರಸನ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ"

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ "1990ನೇ ಇಸವಿಯ ಕರ್ನಾಟಕ ಹಿಡುವಳಿಗಳ ತುಂಡೀಕರಣ ನಿರೋಧ ಮತ್ತು ಸಂಯೋಜನ (ನಿರಸನ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

1990ನೇ ಇಸವಿಯ ಕರ್ನಾಟಕ ಭೂ ಸುಧಾರಣ (ಎರಡನೇ ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, 1990ನೇ ಇಸವಿಯ ಕರ್ನಾಟಕ ಭೂ ಸುಧಾರಣ (ಎರಡನೆ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಈ ಭೂಸುಧಾರಣೆ ಕಾನೂನಿನ ಅಡಿಯಲ್ಲಿ ಕೆಲವು ತಿದ್ದುಪಡಿಗಳನ್ನು ನಾವು ತಂದಿದ್ದೇವೆ. ಸುಮಾರು 14 ತಿದ್ದುಪಡಿಗಳಲ್ಲಿ ಸುಮಾರು 8 ತಿದ್ದುಪಡಿಗಳು ನಮ್ಮ ಎಕ್ಸ್‌ಸರ್ವಿಸ್‌ಮನ್‌ಗಳ ಬಗ್ಗೆ ಇವೆ. ಅವರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕನ್ನುವ ದೃಷ್ಟಿಯಿಂದ ಸೈನಿಕ್‌ಬೋರ್ಡ್‌ನವರು ಕೆಲವು ಸಲಹೆಗಳನ್ನು ಕೂಡ ನಮಗೆ ಕೊಟ್ಟಿದ್ದರು.

ಅವರು ಈ ದೇಶಕ್ಕಾಗಿ ಸೇವೆ ಸಲ್ಲಿಸುತ್ತಿದ್ದಾರೆ, ಅದಕ್ಕಾಗಿ ಅವರಿಗೆ ಕೆಲವು ಅನುಕೂಲಗಳನ್ನು ಮಾಡಿಕೊಡಬೇಕೆಂದು ಕೇಳಿಕೊಂಡ ಮೇಲೆ ಎಲ್ಲೆಲ್ಲಿ ರೀಸ ನಬಲಾಗಿ ಒಪ್ಪಬಹುದು ಅಂಥವನ್ನೆಲ್ಲ ಇಲ್ಲಿ ಅಳವಡಿಸಿದ್ದೇವೆ. ಅವರಿಗೆ ಕೆಲವು ಸಲವತ್ತು ಕೊಟ್ಟಿದ್ದೇವೆ. ಇನ್ನು ಸೆಕ್ಷನ್ 53ಕ್ಕೂ ಕೂಡ ಮಹತ್ವದ ತಿದ್ದುಪಡಿ ತರಲಾಗಿದೆ. ಅನೇಕ ಟೆನೆಂಟ್‌ಗಳು ತಮ್ಮ ಪ್ರೀಮಿಯಮನ್ನು ಏನು ತುಂಬಬೇಕಾಗಿತ್ತು ಅದನ್ನು ತುಂಬಿರಲಿಲ್ಲ, ಬಹಳ ಹಿಂದಿನಿಂದ ಇದರ ಬಗ್ಗೆ ಬೇಡಿಕೆ ಇತ್ತು. ಅನೇಕ ಮಾನ್ಯ ಸದಸ್ಯರು ಟೆನೆಂಟ್ಸ್‌ಗೆ ಮುಫ್ತತಾಗಿ ಜಮೀನು ಕೊಡಬೇಕೆಂದು ಒತ್ತಾಯಿಸಿದ ಮೇಲೆ ಮತ್ತು ಹೊರಗಡೆ ಕೂಡ ಮಾನ್ಯ ಮುಖ್ಯಮಂತ್ರಿಗಳು ಸಚಿವರು ಹೋದಾಗ, ಈ ಬೇಡಿಕೆ ಇಡುತ್ತಿದ್ದರು. ಅದಕ್ಕಾಗಿ ಒಂದು ಮಹತ್ವದ ನಿರ್ಣಯ ತೆಗದುಕೊಂಡಿದ್ದರಿಂದ ಸರ್ಕಾರಕ್ಕೆ 15 ಕೋಟಿ ಲುಕ್ಸಾನಾಗುತ್ತದೆ ಆದರೂ

ಕೂಡ ಬಡವರಿಗೆ ಗೇಣಿದಾರರಿಗೆ ಅನುಕೂಲವಾಗುತ್ತದೆಂದು ಈ ತಿದ್ದುಪಡಿ ತಂದಿದ್ದೇವೆ. ಲಕ್ಷಾಂತರ ಜನರು ಇದರ ಪ್ರಯೋಜನ ಪಡೆಯುತ್ತಾರೆ. ಆಮೇಲೆ ಹಿಂದೆ ಲ್ಯಾಂಡ್‌ಲೆಸ್ ಪರ್ಸನ್ಸ್‌ಗೆ ವಾರ್ಷಿಕ ಆದಾಯ 4800 ಮತ್ತು ಎಕ್ಸ್‌ಮಿಲಿಟರಿ ಪರ್ಸನ್ಸ್ ಏನಿದ್ದರು, ಅವರಿಗೆ ವಾರ್ಷಿಕ ಆದಾಯ 12000ಕ್ಕಿಂತ ಜಾಸ್ತಿಯಾಗಬಾರದೆಂದು ಈಗ ಜಾಸ್ತಿ ಮಾಡಿದ್ದೇವೆ. ಮೊದಲು ಇದ್ದುದು ಬಹಳ ಕಡಿಮೆ. 2500 ಮತ್ತು 6000 ಎಂದಿತ್ತು. ಈಗ ಇದಕ್ಕೆ ತಿದ್ದುಪಡಿ ಮಾಡಿದ್ದೇವೆ. ಈಗ ಹಣದ ಬೆಲೆಯೂ ಕಮ್ಮಿಯಾಗಿರುವುದರಿಂದ ಈ ಸವಲತ್ತು ಅವರಿಗೆ ಸಿಗಬೇಕೆಂದು ಈ ರೀತಿ ತಿದ್ದುಪಡಿ ಮಾಡಿದ್ದೇವೆ. ಆಮೇಲೆ ಸೆಕ್ಷನ್ 79ಎನಲ್ಲಿ ಕೂಡ ಹಿಂದೆ ಇನ್‌ಕಂ ಲಿಮಿಟ್ ಏನು ಹಾಕಿತ್ತು 12 ಸಾವಿರ ಇದ್ದುದನ್ನು ಈಗ 50 ಸಾವಿರಕ್ಕೆ ಮಾಡಿದ್ದೇವೆ ತಮಗೇ ಗೊತ್ತಿದೆ 12 ಸಾವಿರಕ್ಕೆ ನಾವು ಫಿಕ್ಸ್ ಮಾಡಿದ್ದು 75-76ರಲ್ಲಿ ಇವೊತ್ತಿನ ರೇಟಿಗೆ ಈ 12 ಸಾವಿರಕ್ಕೆ ತುಂಬ ಕಡಿಮೆಯಾಗುತ್ತದೆಂದು ಕಂಡುಬಂದ ಮೇಲೆ 50 ಸಾವಿರ ಇನ್‌ಕಮನ್ನು ಏರಿಸಿದ್ದೇವೆ. ಯಾರಿಗೆ 50 ಸಾವಿರಕ್ಕಿಂತ ಕಡಿಮೆ ಆದಾಯ ಇದೆ ಅವರು ಜಮೀನು ಪರ್ಚೇಸ್ ಮಾಡುವುದಕ್ಕಾಗಲಿ ಮಾರುವುದಕ್ಕಾಗಲೀ ಅನುಕೂಲವಾಗುತ್ತದೆ. ಇದನ್ನು 1 ಲಕ್ಷ ಮಾಡಬೇಕು ಮತ್ತು ರೆಟ್ರಾಸ್ಪೇಕ್ಟೀವ್ ಎಫ್‌ಕ್ಟಿಗೆ ಕೊಡಬೇಕೆಂದು ಕೇಳುತ್ತಿದ್ದಾರೆ. ಹಾಗೇನಾದರೂ ಮಾಡಿದರೆ ಬೆಂಗಳೂರು ಅಕ್ಕಪಕ್ಕ ಅನೇಕ ದೊಡ್ಡ ಶ್ರೀಮಂತರು ಬಂದು ಫಾರ್ಮರ್ಸ್ ಜಮೀನನ್ನು ಪರ್ಚೇಸ್ ಮಾಡಬಹುದೆಂದು ಸಂಶಯ ಬಂದಿದ್ದರಿಂದ ಸದ್ಯದಲ್ಲಿ 50 ಸಾವಿರ ಇರಲಿ ಎಂದು ಈ ತಿದ್ದುಪಡಿ ತಂದಿದ್ದೇವೆ. ಇದಕ್ಕೆ ಎಲ್ಲರದ್ದೂ ಒಪ್ಪಿಗೆಯಿದೆಯೆಂದು ನಾನು ಭಾವಿಸಿದ್ದೇವೆ. ಇದೊಂದು ಪ್ರಗತಪರ ತಿದ್ದುಪಡಿ ಇದಕ್ಕೆ ಮೊದಲಿನ ಮೂರು ತಿದ್ದುಪಡಿಗಳಿಗೆ ಒಪ್ಪಿದಂತೆ ಇದಕ್ಕೂ ಕೂಡ ಒಪ್ಪಿಗೆ ಕೊಡಬೇಕು. ಇದರಿಂದ ಟೆನೆಂಟ್ಸ್‌ಗೆ ಅನುಕೂಲವಾಗುತ್ತದೆ. ಸೋಲ್ಜರ್ಸ್‌ಗೆ ಅನುಕೂಲವಾಗುತ್ತದೆ ಮತ್ತು 65 ವರ್ಷ ವಯಸ್ಸಿನ ಲ್ಯಾಂಡ್ ಲಾರ್ಡ್ಸ್‌ಗೂ ಲಂಪ್‌ಸಮ್ಮಾಗ್ರಿ ಒಂದೇ ಸಲ ಹಣ ಕೊಡಬೇಕೆಂದು ನಾವು ಇದರಲ್ಲಿ ಮಾಡಿದ್ದೇವೆ. ಹೀಗೆ ಇದು ಸೋಲ್ಡರ್ಸ್‌ಗೆ ವಯಸ್ಸಾದ ಭೂಮಾಲೀಕರಿಗೆ ಹಾಗೂ ಗೇಣಿದಾರರಿಗೆ ಸಂಬಂಧಪಟ್ಟದ್ದು ಮತ್ತು ರಿಸರ್ಚ್ ಇನ್‌ಸ್ಟಿಟ್ಯೂಟ್‌ಗಳಿಗೆ ಕೂಡ ಯಾವುವು ಕೇಂದ್ರ ಮತ್ತು ರಾಜ್ಯದಿಂದ ಮಾನ್ಯವಾಗಿವೆಯೋ ಅವಕ್ಕೆ ಮಾತ್ರ ಸವಲತ್ತು ಕೊಡಲು ಇದರಲ್ಲಿ ವ್ಯವಸ್ಥೆ ಮಾಡಿದ್ದೇವೆ. ಇದಕ್ಕೆ ತಾವೆಲ್ಲರೂ ಒಮ್ಮತದಿಂದ ಅನುಮತಿ ಕೊಡಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

+ ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಈಗ ಭೂಸುಧಾರಣೆ ಕಾನೂನಿಗೆ ಗೇಣಿ ಮೊತ್ತ ನಿರ್ಧರಿಸುವ ಬಗ್ಗೆ ತಿದ್ದುಪಡಿ ತಂದಿದ್ದೀರಿ. ಹಿಂದೆ ಗೇಣಿ ಎಂದು ಹೇಳಿದರೆ ಕಂದಾಯದ ಹತ್ತರಷ್ಟು ಎಂದು ಇತ್ತು. ಈಗ ಅದು ಕಂದಾಯದ ಉತ್ಪಾದನೆಯ ಐದರಷ್ಟು ಅಥವಾ ಬೇರೆ ಏನೇನೋ ಸೇರಿಸಿದ್ದೀರಲ್ಲಾ. ಆ ರೀತಿ ಮಾರ್ಪಾಡು ಮಾಡುವುದಕ್ಕೆ ಏನು ಕಾರಣ ಎನ್ನುವುದನ್ನು ದಯವಿಟ್ಟು ಹೇಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) : ಈಗ

"(a) in the case of A or B class of land, one-fourth of the gross produce or its value in cash which in any case shall not exceed rupees five hundred per acre ; and

(b) in the case of any other class of land, one-fifth of the gross produce or its value in cash which in any case shall not exceed rupees two hundred and fifty per acre ; or the contract rent whichever is less."

ಅವರಿಗೆ ಕೊಡತಕ್ಕಂಥ ರೆಂಟನ್ನು ಫಿಕ್ಸ್ ಮಾಡಿರತಕ್ಕಂಥದ್ದು.

ಶ್ರೀ ಕಾಗೋಡು ತಿಮ್ಮಪ್ಪ : ಹಿಂದೆ ನಾವು ಭೂಸುಧಾರಣೆಯನ್ನು ಮಾಡಿದಂಥ ಕಾಲದಲ್ಲಿ ಹಿಂದೆ ಉತ್ಪಾದನೆಯ ನಾಲ್ಕನೇ ಒಂದು ಭಾಗ ಅಥವಾ ಐದನೇ ಒಂದು ಭಾಗ ಇದ್ದಂಥದ್ದನ್ನು ನಾವು 73ರಲ್ಲಿ ತಿದ್ದುಪಡಿಯನ್ನು ಮಾಡಿದಂಥ ಕಾಲದಲ್ಲಿ ತೆಗೆದುಹಾಕಿ ಕಂದಾಯದ ಗೇಣಿ ಎಂದು ಹೇಳಿದರೆ ಕಂದಾಯದ ಹತ್ತರಷ್ಟು ಎಂದು ಹೇಳಿ ಇವತ್ತಿನವರೆಗೂ ಅದು ಚಾಲ್ತಿಯಲ್ಲಿದೆ. ಆದರೆ ಈಗ ಮತ್ತೆ ಉತ್ಪಾದನೆಯ ಐದರಷ್ಟು ಎಂದು ಮಾಡಿದ್ದೀರಿ. ಇದಕ್ಕೆ ಕಾರಣರು ಯಾರು? ಇದನ್ನು ಯಾರು ಒತ್ತಾಯ ಮಾಡಿದರು? ಇದಕ್ಕೆ ಪ್ರೇರೇಪಣೆ ಯಾರದ್ದು ಇದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದನ್ನು ಎಕ್ಸ್‌ಕ್ಲ್ಯೂಸಿವ್ ಆಗಿ ನಾವು ಸೈನಿಕರಿಗೆ ಮಾತ್ರ ಅನ್ವಯಿಸುತ್ತಿದ್ದೇವೆ. ಬೇರೆಯವರಿಗೆ ಸಂಬಂಧವೇ ಇಲ್ಲ. ಸೈನಿಕರು ಈ ದೇಶಕ್ಕಾಗಿ ಹೋರಾಟವನ್ನು ಮಾಡುತ್ತಿರುತ್ತಾರೆ. ಅವರು ಇಲ್ಲಿ ಇರುವುದಿಲ್ಲ. ಅವರಿಗೆ ಅನುಕೂಲವಾಗಲಿ ಎಂದು ಹೇಳಿ ಅವರಿಗೆ ಮಾತ್ರ ಈ ಅಮೆಂಡ್‌ಮೆಂಟ್ ಇರತಕ್ಕಂಥದ್ದು ಇದು ಅವರಿಗೆ ಮಾತ್ರ ಸಂಬಂಧಪಟ್ಟಿರತಕ್ಕಂಥದ್ದು. ಬೇರೆಯವರಿಗೆ ಇದು ಸಂಬಂಧಪಟ್ಟಿರುವುದಿಲ್ಲ.

ಶ್ರೀ ಸಿ. ಬೈರೇಗೌಡ : ಇದರ ಡೆಫನೀಷನನ್ನು ಛೇಂಜ್ ಮಾಡಬೇಕಾಗಿರುವುದಕ್ಕೆ ಕಾರಣವೇನು?

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೇ, ಈ ಬಿಲ್ಲನ್ನು ನಾನು ಸ್ವಾಗತ ಮಾಡುತ್ತಾ ಖರ್ಗೆಯವರಿಗೆ ನಾವು ಅಭಿನಂದಿಸಬೇಕು. ನನಗನ್ನಿಸುತ್ತದೆ. ಈ ಸದನದ ಇತಿಹಾಸದಲ್ಲಿ ಅವರು ಹ್ಯಾಟ್ರಿಕ್‌ಗಿಂತ ಮೇಲೆ ಮಾಡಿದ್ದಾರೆ. ಏಕೆಂದರೆ ಇವತ್ತು ತಾವು ನಾಲ್ಕನೇ ಬಿಲ್ಲನ್ನು ಪಾಸು ಮಾಡಿಕೊಳ್ಳುತ್ತಿದ್ದೀರಿ ನಮ್ಮ ಕಡೆಯಿಂದ. ಬಹುಶಃ ಈ ಸದನದ ಇತಿಹಾಸದಲ್ಲಿಯೆ ಈತನಕ ಮಾಡಿಕೊಂಡಿಲ್ಲ.

SRI M. MALLIKHARJUNA M. KHARGE : Without their support how can I get it passed?

ತಮ್ಮ ಸಪೋರ್ಟ್ ಇದೆ. ಅದಕ್ಕೆ ಪಾಸಾಗಿದೆ.

ಶ್ರೀ ಆರ್.ವಿ. ದೇಶಪಾಂಡೆ : ಸದನದ ಇತಿಹಾಸದಲ್ಲಿಯೇ ಮೊದಲನೆಯದು. ನಾಲ್ಕು ಮಸೂದೆಗಳನ್ನು ಯಾವ ಮಂತ್ರಿಯೂ ಇವತ್ತಿನತನಕ ಪಾಸು ಮಾಡಿಕೊಂಡು ಹೋಗಿಲ್ಲ. ನಿಜವಾಗಿಯೂ ನಾನು ಈ ಬಿಲ್ಲನ್ನು ಸ್ವಾಗತ ಮಾಡಬೇಕಾಗಿದೆ. ಏಕೆಂದರೆ ಯಾವ ಈ ಸೈನಿಕರು ದೇಶದ ಸಲುವಾಗಿ ತ್ಯಾಗವನ್ನು ಮಾಡುತ್ತಿದ್ದಾರೆ. ಅವರಿಗೆ ತಾವು ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದೀರಿ ಬಹಳ ಸಂತೋಷದ ಸಂಗತಿ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಅದೇ ಪ್ರಕಾರ ಸಣ್ಣ ಹಿಡುವಳಿದಾರರಿಗೆ ಹತ್ತು ಸಾವಿರ ರೂಪಾಯಿಗಳತನಕ ತಾವು ಇನ್‌ಕಂ ಲಿಮಿಟ್‌ನ್ನು ಹಾಕಿದ್ದೀರಿ. ಅದನ್ನು ಸಹಾ ಸ್ವಾಗತ ಮಾಡಬೇಕಾಗುತ್ತದೆ. ಇವತ್ತು ಲಂಮ್ಸ್‌ಸಮ್ ಪೇಮೆಂಟ್ ಬಗ್ಗೆ ತಾವು ಈಗಾಗಲೇ ವಿಡೋಸ್, ಮೈನರ್ಸ್ ಲಂಪ್‌ಸಮ್

ಪೇಮೆಂಟ್ಸ್ ಇದೆ, ಯಾರಿಗೆ ವಯಸ್ಸು 65 ಆಗಿದೆ, ಅವರಿಗೆ ಮಾಡುತ್ತಿದ್ದೀರಿ, ಬಹಳ ಸಂತೋಷ. ಆದರೆ ಇದರಲ್ಲಿ ಏನಾಗಿದೆ ಎಂದರೆ 1-3-74ಕ್ಕೆ ಎಲ್ಲಾ ಲ್ಯಾಂಡ್ಸ್ ಗೌರ್ನಮೆಂಟ್‌ನಲ್ಲಿ ವೇಸ್ಟ್ ಆಯಿತು. 1-3-74 ರಂದು ಎಲ್ಲಾ ಭೂಮಿಯು ಸರ್ಕಾರದ ಜಮಾ ಆಯಿತು. On 1.3.1974 lands were vested in the Government.ಆ ದಿವಸದಿಂದ ಭೂಮಿ ಸರ್ಕಾರದ್ದು ಆದ ನಂತರ ಭೂಮಾಲೀಕರಿಗೆ ಯಾವ ತರಹದ ರೆಂಟೂ ಬರುವುದಿಲ್ಲ, ಯಾವುದೇ ತರಹದ ಪರಿಹಾರ ಬರುವುದಿಲ್ಲ. ಪರಿಹಾರ ಬರುವುದು ಎಂದರೆ ಒಂದೇ ಕಾಂಪ್‌ನ್‌ನೇಷನ್. ವಿಡೋಸ್, ಮೈನರ್ಸ್, ಲುನಾಟಿಕ್ಸ್ ಎಲ್ಲಾ ಅವರಿಗೆ ಲಂಪ್‌ಸಮ್‌ನ್ನು ಕೊಡುತ್ತಿದ್ದರು. ಈಗ 65 ವಯಸ್ಸಾದರೆ ಲಂಪ್‌ಸಮ್ ಮಾಡಿದ್ದೀರಿ. ಸಂತೋಷ. ಆದರೆ ಯಾವಾಗ ಪೇಮೆಂಟ್ಸ್ ಆಗಿದೆ? ಬೇರೆ ಲ್ಯಾಂಡ್‌ಲಾರ್ಡ್ಸ್ ಯಾರು ಇದ್ದಾರಲ್ಲಾ, ಅವರಿಗೆ ಎರಡು ಸಾವಿರ ರೂಪಾಯಿಯನ್ನು ಕೊಡುತ್ತಿದ್ದೀರಿ. ಈ ಲಂಪ್‌ಸಮ್ ಕ್ಯಾಟೆಗೆರಿಯನ್ನು ಬಿಟ್ಟರೆ ಕೇವಲ ಎರಡು ಸಾವಿರ ರೂಪಾಯಿ ಕೊಡುವುದು ಬಾಕಿ ಹಣ. ಅದನ್ನು ಕಂತಿನಿಂದ ಕೊಡಬೇಕು ಎಂದು ಆಯಿತು. ಅನಂತರ ಅದಕ್ಕೆ ಅಮೆಂಡ್‌ಮೆಂಟ್ ಬಂತು, ಎನ್.ಎಸ್.ಸಿ. ಸರ್ಟಿಫಿಕೇಟನ್ನು ಕೊಡಬೇಕು ಎಂದು. ಈ ಸರ್ಟಿಫಿಕೇಟನ್ನು ಕೊಡುತ್ತಿದ್ದೀರಿ. ಆದರೆ ಪೇಮೆಂಟ್ ಏನಾಗಿದೆ, 74ರಲ್ಲಿ ಭೂಮಿ ಲ್ಯಾಂಡ್‌ಲಾರ್ಡ್ಸ್‌ಗೆ ಹೋದರೂ ಸಹಾ ಪೇಮೆಂಟ್ 81-82ನೇ ಪ್ರಾರಂಭ ಇಸವಿಯಿಂದ ಆಯಿತು. 81-82ನೇ ಇಸವಿಯಿಂದ ಪೇಮೆಂಟ್ ಆಗಿದೆ. ಇದರ ಸಲುವಾಗಿ ತಾವು ಈಗ ಪೇಮೆಂಟ್ ಮಾಡುವಾಗ 1-3-74ರಿಂದ ಇಂಟರೆಸ್ಟ್ ಕೊಡುತ್ತಿದ್ದೀರಿ

48 'ಎ' ಪ್ರಕಾರ ಯಾವ ದಿನ ಲ್ಯಾಂಡ್ ಟ್ರಿಬ್ಯೂನಲ್ ಅಕ್ಯುಪೇಷನ್ ರೈಟ್ ಕೊಡುತ್ತದೆ ಅದೇ ದಿವಸ ಹಣದ ಮೇಲೆ ತಾವು ಇಂಟರೆಸ್ಟ್ ಕೊಡುತ್ತೀರಿ. ಯಾರು ಪೇಮೆಂಟ್ ತೆಗೆದುಕೊಂಡು ಹೋಗಿದ್ದಾರೆ, ಅವರಿಗೆ ಇಂಟರೆಸ್ಟ್ ಕೊಡುತ್ತಿಲ್ಲ. ಆದರಿಂದ ಸಾಕಷ್ಟು ಅನ್ಯಾಯವಾಗಿದೆ. ಅದನ್ನು ಪರಿಶೀಲನೆ ಮಾಡಬೇಕು. ಎಲ್ಲರಿಗೂ ಒಂದೇ ಕಾಯಿದೆಯನ್ನು ಮಾಡಬೇಕಾದರೆ, ಯಾವ ದಿನ ರೈತನ ಪರವಾಗಿ ಡಿಸೀಷನ್ ಬರುತ್ತದೆ ಅದೇ ದಿವಸದಿಂದ ಆ ಹಣದ ಮೇಲೆ ಇಂಟರೆಸ್ಟ್ ಕೊಡುವಂತಹ ವ್ಯವಸ್ಥೆ ಆಗಬೇಕು. ಯಾರಿಗೆ ಇಂಟರೆಸ್ಟ್ ಕೊಟ್ಟಿಲ್ಲ, ಯಾವ ಅರ್ಜಿಗಳು ಪೆಂಡಿಂಗ್‌ನಲ್ಲಿವೆ, ಅವುಗಳನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೆಲವು ಕಡೆ ಗೌರ್ನಮೆಂಟ್ ಸರ್ಕ್ಯುಲರ್ ಇದ್ದುದರಿಂದ, ಕನ್‌ಫ್ಯೂಜನ್ ಆಗಿ ಡ್ರೈಲ್ಯಾಂಡ್ ವೆಟ್ ಲ್ಯಾಂಡ್ ಹೇಳಿ ಪೇಮೆಂಟ್ ಆಗಿದೆ. ಇವತ್ತು ಅವರು ಕೇಳುದ್ದಾರೆ. ಒಂದು ಸರ್ಕುಲರ್ ಪ್ರಕಾರ ವೆಟ್‌ಲ್ಯಾಂಡ್ ಅಂತ ಹೇಳಿದ್ದೀರಿ, ಮತ್ತೊಂದು ಸರ್ಕ್ಯುಲರ್ ಪ್ರಕಾರ ಡ್ರೈಲ್ಯಾಂಡ್ ಅಂತಹೇಳಿದ್ದೀರಿ. ಕೆಲವು ಜನ ವೆಟ್‌ಲ್ಯಾಂಡ್ ಅಂತ ಪೇಮೆಂಟ್ ತೆಗೆದುಕೊಂಡು ಹೋಗಿದ್ದಾರೆ. ಕೆಲವು ಡ್ರೈಲ್ಯಾಂಡ್ ಅಂತ ಪೇಮೆಂಟ್ ಮಾಡಿದ್ದೀರಿ. ಅದನ್ನು ಸಹ ಸರಿಪಡಿಸಿ ಎಂದು ಒತ್ತಾಯ ಮಾಡುತ್ತಿದ್ದಾರೆ. ಅದು ಸಹ ಸರ್ಕಾರದ ಗಮನಕ್ಕೆ ಬಂದಿರಬಹುದು, ಅದರ ಬಗ್ಗೆ ನೀವು ವರದಿ ತರಿಸಿ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಕಾನೂನಿಗೆ ಮತ್ತೊಂದು ಅಮೆಂಡ್‌ಮೆಂಟ್ ಮಾಡಿದ್ದೀರಿ, 12 ಸಾವಿರ ಇನ್‌ಕಮ್ ಲಿಮಿಟ್ ಇತ್ತಲ್ಲ, ಅದು ನಾನ್‌ಅಗ್ರಿಕಲ್ಚರ್ ಲ್ಯಾಂಡ್ ಅನ್ನು ಅಕ್ವೈರ್ ಮಾಡಬೇಕಾದರೆ ಇನ್‌ಕಮ್ 12 ಸಾವಿರ ಇದ್ದರೆ ಮಾಡಲಿಕ್ಕೆ ಬರುತ್ತಿರಲಿಲ್ಲ, ಆದ್ದರಿಂದ 50 ಸಾವಿರ ಮಾಡಿದ್ದೀರಿ, ಸಂತೋಷ

ಆದರೆ I am going one step forward and say this section is redundant....ಇದರಲ್ಲಿ ಏನು ಅರ್ಥವಿಲ್ಲ, ಇದನ್ನು ತೆಗೆಯಬೇಕಾಗುತ್ತದೆ. ಆ ಕಾಲದಲ್ಲಿ ಒಂದು ಭಯ ಇತ್ತು. ದೊಡ್ಡದೊಡ್ಡ ಜನ ಭೂಮಿ ಅಕ್ವೈರ್ ಮಾಡಿಕೊಳ್ಳುತ್ತಾರೆಂದು ಆ ಕಾಲದಲ್ಲಿ ಭಯ ಇತ್ತು. ಬಸವಲಿಂಗಪ್ಪನವರಾಗಲಿ, ವೀರಪ್ಪಮೊಯಿಲಿಯವರಾಗಲಿ, ಮತ್ತು ದೇಶಪಾಂಡೆಯವರಾಗಲಿ 54 ಎಕರೆ ಮೇಲೆ ಭೂಮಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ One can acquire 54 acres of D class land...ಅದರಿಂದಾಗಿ ಇವತ್ತು ಹಳ್ಳಿಯಲ್ಲಿ ಭೂಮಿ ಸಾಗುವಳಿ ಮಾಡಲಿಕ್ಕೆ ಜನ ಸಿಗುತ್ತಿಲ್ಲ. ಈಗ ತಾವು ಏನು ಇನ್‌ಕಮ್ ಲಿಮಿಟ್ ಹಾಕುತ್ತಿದ್ದೀರಿ, ಅದು ಇವತ್ತು ನಮ್ಮ ಸರ್ಕಾರಿ ನೌಕರರಾದ ಡ್ರೈವರುಗಳ ಪಗಾರ ಸುಮಾರು ಮೂರೂವರೆ ಯಿಂದ ನಾಲ್ಕುಸಾವಿರ ರೂಪಾಯಿಯವರೆಗೆ ತಿಂಗಳಿಗೆ ಕೊಡುತ್ತಿದ್ದೀರಿ. ನಿಮ್ಮ ಪ್ರೈವೇಟ್ ಸೆಕ್ರೆಟರಿಯವರ ಪಗಾರ 4-5 ಸಾವಿರ ತಿಂಗಳಿಗೆ ಇರಬಹುದು ಇಂತಹ ಸಂದರ್ಭದಲ್ಲಿ ತಾವು ಇನ್‌ಕಂ ಲಿಮಿಟ್ 50 ಸಾವಿರ ಮಾಡಿದ್ದೀರಿ. ಅದನ್ನು ಕಂಪ್ಲೀಟ್ ತೆಗೆದರೆ ಅದರಿಂದ ಉಪಯೋಗವಾಗುತ್ತದೆ. ಈ ಸೆಕ್ಷನ್ ಡಿಲೀಟ್ ಮಾಡಿದರೆ ಒಳ್ಳೆಯದು ಎನ್ನುವಂತಹದ್ದು ನನ್ನ ಅಭಿಪ್ರಾಯ. ಅದರ ಬಗ್ಗೆ ತಾವು ವಿಚಾರ ಮಾಡಬೇಕೆಂದು ಈ ಸದನದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಈ ಭೂಸುಧಾರಣೆ ತಿದ್ದುಪಡಿ ಮಸೂದೆಯನ್ನು ನಾನು ಸ್ವಾಗತ ಮಾಡುತ್ತಾ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉಪಾಧ್ಯಕ್ಷಿಣಿಯವರೇ, ನನ್ನ ದೃಷ್ಟಿಯಲ್ಲಿ ಈ ಬಡ ಗೇಣಿದಾರನಿಗೆ ಉಪಯೋಗ ಮಾಡುತ್ತೇವೆಂದು ಹೇಳಿ ಈ ತಿದ್ದುಪಡಿಯನ್ನು ತರುವುದಕ್ಕೆ ಹೊರಟಿದ್ದೀರಿ, ಇದುವರೆಗೂ ಬಡ ಗೇಣಿದಾರಣಿಗೆ ದ್ರೋಹ ಮಾಡಿ, ಅವನ ಮೂಗಿಗೆ ತುಪ್ಪವನ್ನು ಹಚ್ಚುವಂತಹ ಪ್ರಯತ್ನ ಮಾಡುತ್ತಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಒಂದು ಪಾಯಿಂಟ್ ಮರೆತೆ, ಏನೆಂದರೆ, 10 ಎಕರೆ ಭೂಮಿ (ದಿ) ಕ್ಲಾಸ್ ಲ್ಯಾಂಡ್ ಅಂತ ಹೇಳಿ ಫ್ರೀ ಆಗಿ ಮಾಡುತ್ತಿದ್ದಾರೆ. ಇದರಿಂದ ಬಹಳ ಸಂತೋಷ. ನಾವು ಆದೇಶವನ್ನು ಹೊರಡಿಸಿದ್ದೆವು. ತಾವು ಮಾಡುತ್ತಿದ್ದೀರಿ. ಯಾರು ಲ್ಯಾಂಡ್ ರೆವಿನ್ಯೂ ಡಿಫಾಲಟರ್ಸ್ ಇದ್ದಾರೋ ಅವರಿಗೆ ಅಡ್‌ವಾಂಟೇಜ್ ಆಯಿತು.. ಯಾರು ಇವತ್ತು ಸರ್ಕಾರಕ್ಕೆ ಹಣ ತುಂಬಬೇಕೋ ಅವರಿಗೆ ಅಡ್ವಾನ್‌ಟೇಜ್ ಆಯಿತು. ಪ್ರಾಮ್ಟ್ ಆಗಿ ಯಾರು ಸರ್ಕಾರಕ್ಕೆ ಹಣ ತುಂಬಿದ್ದಾರೆ ಆ ರೈತನ ಪರಿಸ್ಥಿತಿ ಏನು? ರೈತರೆಂದರೆ ಎಲ್ಲರೂ ಒಂದೇ. ಎಲ್ಲರನ್ನೂ ಒಂದೇ ತರಹ ನೋಡಬೇಕಾಗುತ್ತದೆ. ಈ ಕ್ಯಾಟಗರಿಯಲ್ಲಿ ಬರುವ ಎಲ್ಲಾ ರೈತರಿಗೆ ಕೊಡುವಂತಹ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಈಗಾಗಲೇ ಈ ಕ್ಯಾಟಗರಿಯಲ್ಲಿ ಬರುವ ರೈತರು ಹಣ ಕೊಟ್ಟಿದ್ದರೆ ಅದನ್ನು ಮರು ಪಾವತಿ ಮಾಡಬೇಕೆಂದು ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

3.15 ಪಿ.ಎಂ

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಕೇಳಲಿಕ್ಕೆ ಹೊರಟಿದ್ದೆ. ಏನೆಂದರೆ ಇವರು ಬಡ ಗೇಣಿದಾರನನ್ನು ಉದ್ಧಾರ ಮಾಡುತ್ತೇವೆಂದು ಹೇಳಿ ಬಡ ಗೇಣಿದಾರನಿಗೆ ದ್ರೋಹ ಮಾಡಿ ಅವನ ತುಟಿಗೆ ತುಪ್ಪ ಹಚ್ಚುವಂಥ ಒಂದು ಕೆಲಸ ಮಾಡುವ ಪ್ರಯತ್ನ ನೀವು ಮಾಡುತ್ತಿದ್ದೀರಿ. ಈ ಸದನದಲ್ಲಿ ಕಳೆದ ಎರಡು ವರ್ಷಗಳಿಂದ ಸತತವಾಗಿ ನಾನು ಅನೇಕ ಬಾರಿ ಅಧಿಕಾರದಲ್ಲಿದ್ದಂಥ ಸರ್ಕಾರಕ್ಕೆ ಒತ್ತಾಯ ತಂದಿದ್ದೇನೆ. ಅದೇನೆಂದರೆ, ಹಿಂದೆ

ಇದ್ದಂಥ ಒಂದು ಸರ್ಕಾರ 10 ಎಕರೆಯೊಳಗಡೆ ಇರುವಂಥ 'ಡಿ' ಶ್ರೇಣಿ ಜಮೀನು ಯಾವುದು ಇದೆ ಈ ಗೇಣಿದಾರನಿಗೆ ಹಕ್ಕು ಸಿಕ್ಕಿದೆ ಅಂತಹವನ ಹಣ ತುಂಬಬೇಕಾಗಿಲ್ಲ. ಎನ್ನುವಂಥ ಒಂದು ಆಜ್ಞೆ ಹೊರಡುವಂಥ ಸಂದರ್ಭದಲ್ಲಿ ಅದನ್ನು ಪೂರ್ಣ ಮಾಡಲಿಲ್ಲ. ಹೋದವರ್ಷ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ದಯಮಾಡಿ ಮಾನ್ಯ ರೆವಿನ್ಯೂ ಸಚಿವರು ಅಂಕಿಅಂಶಗಳನ್ನು ಕೊಡಬೇಕು. ಹೋದ ವರ್ಷ ಸನ್ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿ ಅಧಿಕಾರವನ್ನು ವಹಿಸಿಕೊಂಡ ಆರು ತಿಂಗಳೊಳಗಾಗಿ ಸುಮಾರು 50 ಕೋಟಿ ರೂಪಾಯಿಗಳೂ ಹೆಚ್ಚು ದುಡ್ಡನ್ನು ಬಡ ಗೇಣಿದಾರನಿಂದ 10 ಎಕರೆಯೊಳಗಡೆ 'ಡಿ' ಶ್ರೇಣಿ ಜಮೀನನ್ನು ಯಾರು ಹೊಂದಿದ್ದಾರೆ, ಅಂತಹವನಿಂದ ದುಡ್ಡು ವಸೂಲು ಮಾಡಿದ್ದೀರಿ. ಇವೊತ್ತು 15 ಕೋಟಿ ರೂಪಾಯಿ ನಮ್ಮ ಸರ್ಕಾರಕ್ಕೆ ಭಾರ ಬರುತ್ತದೆಂದು ಹೇಳುತ್ತಿದ್ದೀರಿ. ನಾನು ತಮ್ಮನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಿಮ್ಮ ಅಂಕಿಅಂಶಗಳ ಪ್ರಕಾರ ಈ ಒಂದು 10ಎಕರೆಯೊಳಗೆ ಇರುವಂಥ 'ಡಿ' ಶ್ರೇಣಿಗೆ ಸರಿಸಮನಾದಂಥ ಬಡ ಗೇಣಿದಾರರು ಎಷ್ಟು ಜನರು ಇದ್ದಾರೆ. ಎಷ್ಟು ಜನ ಬಡಗೇಣಿದಾರರಿಗೆ ಈ ಒಂದು ಲ್ಯಾಂಡ್ ರಿಫಾರಮ್ಸ್ ಆಕ್ಟ್ ಪ್ರಕಾರ ಜಮೀನು ಸಿಕ್ಕಿದೆ. ಈವರೆಗೆ ಎಷ್ಟು ಜನರು 10 ಎಕರೆಯೊಳಗಡೆ ಇರುವಂಥವರು ದುಡ್ಡು ಕಟ್ಟಿದ್ದಾರೆ. ಈಗ ನೀವು 15 ಕೋಟಿ ರೂಪಾಯಿ ನಮ್ಮ ಸರ್ಕಾರದ ಬೊಕ್ಕಸಕ್ಕೆ ಭಾರ ಬರುತ್ತದೆ ಎಂದು ಹೇಳುತ್ತಿದ್ದೀರಿ. ಎಷ್ಟು ಜನರಿಗೆ ಇದರಿಂದ ಅನುಕೂಲವಾಗಿದೆ ಎಂದು ಹೇಳಬೇಕು. ನಾನು ಹೇಳುತ್ತೇನೆ, ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಹಚ್ಚಿದಂತೆ ಆಗಿದೆ ನಾನು ಕಳೆದ 6 ವರ್ಷಗಳಿಂದಲೂ ಈ ಸದನದ ಕಾರ್ಯಕಲಾಪಗಳನ್ನು ವೀಕ್ಷಣೆ ಮಾಡುತ್ತಿದ್ದೇನೆ. ನನಗನಿಸುತ್ತದೆ, ಯಾವುದಾದರೂ ಒಂದು ಹೋರಾಟ ತೆಗೆದುಕೊಂಡಾಗ ಪ್ರಾರಂಭದಲ್ಲಿ ನಿಜವಾಗಿಯೂ ಆ ಸಾಮೂಹಿಕ ನ್ಯಾಯ ದೊರಕಿಸಿಕೊಡಬೇಕೆನ್ನುವ ಕಳಕಳಿ ಸರ್ಕಾರಕ್ಕೆ ಇದ್ದರೆ ತಕ್ಷಣ ಆ ಕಾನೂನು ಜಾರಿಗೆತಂದು, ಅವನಿಗೆ ಅನುಕೂಲ ಮಾಡಿಕೊಡುವಂಥ ಪ್ರಯತ್ನ ಮಾಡಬೇಕು. ನಾನು ಹೇಳಲಿಕ್ಕೆ ಹೊರಟಿದ್ದೆ, ಏನೆಂದರೆ ಸನ್ಮಾನ್ಯ ವೀರೇಂದ್ರ ಪಾಟೀಲರ ಸರ್ಕಾರ ಇದ್ದಾಗ, ಒಂದು ಜವಾಬ್ದಾರಿಯನ್ನು ವಹಿಸಿ, ಮುಖ್ಯಮಂತ್ರಿಗಳು ಆದ ತಕ್ಷಣ, ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ ಎಂದು ಹೇಳಿದಾಗ ಮೊಜಲ ಅವರ ಆಕ್ರೋಶಕ್ಕೆ ತುತ್ತಾದವರು ಯಾರೂ 10 ಎಕರೆಯೊಳಗೆ ಜಮೀನು ಹೊಂದಿರತಕ್ಕಂಥ ಬಡ ಗೇಣಿದಾರರಿಂದ, ನಿಮ್ಮ ತಹಶೀಲ್ದಾರ್‌ರು ಮತ್ತು ಜಿಲ್ಲಾಧಿಕಾರಿಗಳು ಬಲಾತ್ಕಾರದಿಂದ ಸುಮಾರು 50 ಕೋಟಿ ರೂಪಾಯಿಗಳನ್ನು ವಸೂಲು ಮಾಡಿದ್ದಾರೆ. ಈಗ ಏನೋ ದೊಡ್ಡ ಸಾಹಸ ಮಾಡುತ್ತಿದ್ದೇವೆ, ದೊಡ್ಡ ಉಪಕಾರ ಮಾಡುತ್ತಿದ್ದೇವೆಂದು ಹೇಳಿ, ಇವೊತ್ತು ಅವರ ಪ್ರೀಮಿಯಮ್ ಹಣ ರದ್ದು ಮಾಡಲಿಕ್ಕೆ ಹೊರಟಿದ್ದೀರಿ. ನಾನು ಸರ್ಕಾರಕ್ಕೆ ಒತ್ತಾಯಮಾಡಿ ಹೇಳುತ್ತೇನೆ, ನಿಜವಾಗಿ ನಿಮಗೆ ಬಡಗೇಣಿಗಾರನ ಬಗ್ಗೆ ಕಳಕಳಿ ಇದ್ದರೆ, ತಾವು ಹೇಳಬೇಕು. ಹಿಂದೆ ಯಾರು ಕಡುಬಡವ ಪ್ರೇಮರಿಸ್ಕೂಲು ಮಾಸ್ತರು ಒಂದೆರಡು ಎಕರೆ ಜಮೀನು ಇಟ್ಟುಕೊಂಡಿದ್ದವರು ಜಮೀನು ಕಳೆದುಕೊಂಡಿದ್ದಾರೆ. ಅದು ಬಡವನಿಗೆ ಜಮೀನು ಸಿಕ್ಕಿದೆ. ಒಳ್ಳೆಯ ಲ್ಯಾಂಡ್ ರಿಫಾರಮ್ಸ್ ಆಕ್ಟ್ ಜಾರಿಗೆ ತಂದಾಗ ಒಬ್ಬನಿಗೆ ಅನ್ಯಾಯವಾದಾಗ ಲಕ್ಷಾಂತರ ಜನರಿಗೆ ಅನುಕೂಲವಾದಾಗ ಅದನ್ನು ಚರ್ಚೆ ಮಾಡಲಿಕ್ಕೆ ಬರುವುದಿಲ್ಲ. ಆದರೆ ನಿಮ್ಮದು ಏನಿದೆ, ಯಾರೋ ಒಬ್ಬ ಜಮೀನು ಕಳೆದುಕೊಂಡ, ಯಾರೋ ಒಬ್ಬ ಬಡವನಿಗೆ ಜಮೀನು ಸಿಕ್ಕದಮೇಲೆ, ಆವೊತ್ತಿನಿಂದ, ಇವೊತ್ತಿನವರೆಗೂ ಅವರಿಗೆ ಗೋಳುಯ್ದುಕೊಂಡು

ಬಲಾತ್ಕಾರದಿಂದ ಹಣ ವಸೂಲುಮಾಡಿದ್ದೀರಿ, ಕೊನೆಯಪಕ್ಷ ಈ ಶ್ರೇಣಿಗೆ ಯಾರೂ ೧೦ ಎಕರೆಯೊಳಗೆ ಮತ್ತು ಸಮಾನವಾದಂಥ ಶ್ರೇಣಿಗೆ ಸೇರಿದಂಥ ಈ ಬಡ ಗೇಣಿದಾರ ಏನಿದ್ದಾನೆ ಅವನಿಂದ ಏನು ದುಡ್ಡು ವಸೂಲು ಮಾಡಿದ್ದೀರಿ, ಅದನ್ನು ವಾಪಸ್ಸು ಕೊಟ್ಟಾಗ ಮಾತ್ರ ನೀವು ಅವರಿಗೆ ನ್ಯಾಯ ದೊರಕಿಸಿಕೊಟ್ಟಂತೆ ಆಗುತ್ತದೆ, ಇಲ್ಲಿದಿದ್ದರೆ ಇದನ್ನು ನಾನು ವಿರೋಧಮಾಡುತ್ತೇನೆ. ಪ್ರತಿಭಟನೆ ಮಾಡುತ್ತೇನೆ. ಆ ಬಡ ಗೇಣಿದಾರನ ಪರವಾಗಿ ನಾನು ಪ್ರತಿಭಟನೆ ಮಾಡಿ ಈ ಸಭೆಯಿಂದ ಹೊರಗೆ ಹೋಗುವಂಥ ಪರಿಸ್ಥಿತಿ ತಾವು ತರುವುದಾದರೆ ತನ್ನಿ. ನಿಜವಾಗಿಯೂ ಕಳಕಳಿ ನಿಮಗೆ ಇದ್ದರೆ, ಈ ಒಂದು ಶ್ರೇಣಿಯಲ್ಲಿ ಹೆಚ್ಚು ಜನರು ಹರಿಜನರು ಇದ್ದಾರೆ. ಕೃಷಿಕಾರ್ಮಿಕ ಇದ್ದಾರೆ, ಕಡುಬಡವ ಇದ್ದಾನೆ. ಪಿಎಲ್‌ಡಿ ಬ್ಯಾಂಕ್‌ನಲ್ಲಿ ನೀವೇ ಅವನನ್ನು ಸಾಲಗಾರನನ್ನಾಗಿ ಮಾಡಿ, ಸಾಲ ಕೊಡಿಸಿ, ಇವೊತ್ತು ಅದನ್ನು ತುಂಬಿಕೊಡುವಂಥ ಕೆಲಸ ಮಾಡಿಬಿಟ್ಟು ನೀವು ಏನೋ ಒಂದು ಕಾನೂನು ತಂದಿರುವಂಥಾದ್ದು ಮಾಡಿದ್ದೀರಿ. ಯಾರು ಡಿಫಾಲ್ಟರ್ ಇದ್ದಾರೆ, ಯಾರು ದುಡ್ಡು ಕಟ್ಟಿಲ್ಲ, ಯಾರಲ್ಲಿ ಇಂಥ ಪ್ರವೃತ್ತಿ ಇದೆ, ಅಂತಹ ಕ್ರಾನಿಕ್ ಡಿಫಾಲ್ಟರ್ಸ್‌ಗೆ ನೀವು ಅನುಕೂಲ ಮಾಡುವಂಥ ಪ್ರಯತ್ನ ಇವೊತ್ತು ಮಾಡುತ್ತಿದ್ದೀರಿ. ನಿಜವಾದ ಗೇಣಿದಾರನಿಗೆ ಇದರಿಂದ ಅನುಕೂಲವಾಗುವುದಿಲ್ಲ. ನಿಜ, 15 ಕೋಟಿ ರೂಪಾಯಿಯಷ್ಟು ಸಂಖ್ಯೆ ಇರಬೇಕು. ಯಾರಿಗಾದರೂ ಲ್ಯಾಂಡ್‌ರಿಫಾರಮ್ಸ್ ಇದರಲ್ಲಿ ಅನುಕೂಲವಾಗಿದೆಯೆ. ಅದರಲ್ಲಿ ಶೇಕಡ 5 ಭಾಗ ಉಳಿದಿಲ್ಲ ದುಡ್ಡು ಕಟ್ಟುವಂತಹವರು. ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನಲ್ಲಿ ಈ ಶ್ರೇಣಿಗೆ ಸೇರಿದಂಥ ಸುಮಾರು 8-10 ಸಾವಿರ ಜನ ದುಡ್ಡು ಕಟ್ಟಿಯಾಗಿದೆ. ಅದಕ್ಕೆ ನಾನು ಏನು ಒತ್ತಾಯ ಮಾಡುತ್ತೇನೆಂದರೆ ಈಗ ತಾವು ಒಳ್ಳೆಯ ಒಂದು ತಿದ್ದುಪಡಿಯನ್ನು ತಂದಿದ್ದೀರಿ. ತಾವು ದಯಮಾಡಿ ಬಡಗೇಣಿದಾರ ಯಾರಿದ್ದಾನೆ, 10 ಎಕರೆಯೊಳಗಿದ್ದಂಥವರಿಂದ ಏನು ದುಡ್ಡು ವಸೂಲು ಮಾಡಿದ್ದೀರಿ, ಅವರಿಗೆ ಆ ದುಡ್ಡು ವಾಪಸ್ಸು ಕೊಡಿಸಬೇಕು. ಇದನ್ನು ತಿದ್ದುಪಡಿಯಲ್ಲಿ ಅಳವಡಿಸಬೇಕು. ಇನ್ನು ಎರಡನೆಯದು ಅಂದರೆ, ಈ ಸೈನಿಕರಿಗೆ ಒಂದು ರಿಯಾಯಿತಿಯನ್ನು ತಂದಿದ್ದೀರಿ. ಇದು ನಿಜವಾಗಿಯೂ ಅಗತ್ಯವಿರುವಂತಾದ್ದು. ಎಲ್ಲಾ ತನ್ನ ಆಸೆ ಆಕಾಂಕ್ಷೆಗಳನ್ನು ಮರೆತು ಆ ಬಾರ್ಡರ್‌ನಲ್ಲಿ ನಿಂತುಕೊಂಡು ಹೋರಾಟ ಮಾಡಿ ಪ್ರಾಣತ್ಯಾಗಕ್ಕೂ ಸಿದ್ಧನಾಗಿ, ಈ ದೇಶವನ್ನು ಉಳಿಸಲಿಕ್ಕೆ ತುತ್ತಾಗುವಂಥ ಸೈನಿಕರಿಗೆ ಈಗ ಕೊಡುವಂಥ ಕನ್‌ಸೇಷನ್ ಏನೂ ಅಲ್ಲ, ಆದರೆ ಇದಕ್ಕಿಂಥ ಇನ್ನೂ ಹೆಚ್ಚು ಹತ್ತು ಹೆಜ್ಜೆ ಮುಂದೆ ಹೋಗಿ ಅನೇಕ ಅನುಕೂಲಗಳನ್ನು ಮಾಡಿ ಕೊಡಬೇಕಾಗುತ್ತದೆ.

ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇನ್ನೊಂದು ಪ್ರಾಮುಖ್ಯವಾದಂಥಾದ್ದು ಅಂದರೆ ಅದರ್‌ದ್ಯಾನ್ ಅಗ್ರಿಕಲ್ಚರ್ ಇನ್‌ಕಮ್ 12 ಸಾವಿರ ರೂಪಾಯಿ ಇದ್ದುದನ್ನು 50 ಸಾವಿರದವರೆಗೆ ಏರಿಸಿ ಜಮೀನು ಕೊಳ್ಳುವಂಥ ಅವಕಾಶ ಮಾಡಿಕೊಡುವಂತಾದ್ದು ತಂದಿದ್ದೀರಿ. ನಾನು ಹೇಳುತ್ತೇನೆ, ಒಂದು ಲಕ್ಷ ರೂಪಾಯಿಗೆ ಇದನ್ನು ಏರಿಸಿ ಹಿಂದೆ ಇದರ ಬಗ್ಗೆ ಚರ್ಚೆಯಾಗಿದೆ. ಆಗಲೇ ನಾವು ಸಲಹೆ ಕೊಟ್ಟಿದ್ದೆವು. ಈಗ 12 ಸಾವಿರದಿಂದ 50 ಸಾವಿರ ರೂಪಾಯಿಗೆ ಏರಿಸಿದರೆ ಏನೂ ಉಪಯೋಗವಾಗುವುದಿಲ್ಲ, ನಾನು ಸರ್ಕಾರಕ್ಕೆ ಒತ್ತಾಯಮಾಡುತ್ತೇನೆ, ಇದನ್ನು 50 ಸಾವಿರದಿಂದ ಒಂದು ಲಕ್ಷಕ್ಕೆ ಏರಿಸಬೇಕು. ಮತ್ತೆ ಬಡ ಗೇಣಿದಾರರಿಂದ ತಾವೇನು ಪ್ರಿಮಿಯಮ್ ವಸೂಲು ಮಾಡಿದ್ದೀರಿ, ಆ ದುಡ್ಡು ಅವರಿಗೆ ವಾಪಸ್ಸು

ಕೊಡುವುದಕ್ಕೆ ತಾವು ಈ ತಿದ್ದುಪಡಿಯಲ್ಲಿ ಅಳವಡಿಸಬೇಕು. ಅದರ ಬಗ್ಗೆ ಸ್ಪಷ್ಟವಾದಂಥ ಉತ್ತರವನ್ನು ನಾನು ಸರ್ಕಾರದಿಂದ ನಿರೀಕ್ಷೆ ಮಾಡುತ್ತೇನೆ. ಅದು ಆಗಲಿಲ್ಲ ಅಂದರೆ ಇದೊಂದು ತೋರುಗಾರಿಕೆ. ಗೇಣಿದಾರರಿಗೆ ಏನೋ ದೊಡ್ಡ ಉಪಕಾರ ಮಾಡುತ್ತೇವೆಂದು ಹೇಳಿ ಅವನ ತುಟಿಗೆ ತುಪ್ಪವನ್ನೊರಸಿ ದ್ರೋಹ ಮಾಡುವಂಥ ಸರ್ಕಾರ ಈ ನೀತಿಗೆ ನಾನು ಪ್ರತಿಭಟನೆ ಮಾಡಿ ಹೊರಗಡೆ ಹೋಗಬೇಕಾಗುತ್ತದೆ. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ನಾನು ಸರ್ಕಾರದಿಂದ ನಿರೀಕ್ಷಣೆ ಮಾಡುತ್ತೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ರೂರಲ್) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಕರ್ನಾಟಕ ಭೂ ಸುಧಾರಣಾ ಕಾನೂನು ಮೂಲತಃ ಒಂದು ಸಮಾಜವಾದಿ ಕಾನೂನು. ಆದರೆ ಈಗ ಸರ್ಕಾರ ತಂದಿರತಕ್ಕ ತಿದ್ದುಪಡಿ ಅರ್ಧ ಮನಸ್ಸಿನ ಸಮಾಜವಾದಿ ತಿದ್ದುಪಡಿ ಎಂದು ಹೇಳಬೇಕಾಗುತ್ತದೆ. I don't know the reason for this deteriration in this socialist thinking...

ಇಲ್ಲ ಕೇವಲ 10 ಎಕರೆ 'ಡಿ' ಕ್ಲಾಸ್ ಲ್ಯಾಂಡ್ ಇರತಕ್ಕವರಿಗೆ ಮಾತ್ರ ಪ್ರೀಮಿಯಂ ಕಟ್ಟುವುದರಲ್ಲಿ ಇವರಿಗೆ ರಿಯಾಯಿತಿಯನ್ನು ಕೊಡಬೇಕೆಂದು ಪ್ರಸ್ತಾಪ ಇದೆ. ನಾವು ಭೂ ಸುಧಾರಣಾ ಕಾನೂನನ್ನು ಜಾರಿಗೆ ತಂದಿದ್ದು ಸಮಾಜವಾದಿ ವಿಚಾರದ ಆಧಾರಮೇಲೆ ಉಳುವವನೇ ಹೊಲದೊಡೆಯ ಬೆಳೆ ಹಂಚಿಕೆ ವ್ಯವಸ್ಥೆ ರದ್ದುಮಾಡಬೇಕು. ಈ ವಿಚಾರದ ಮೇಲೆ ಮಾಡಿದಂಥ ಕಾನೂನಿಗೆ ಇವತ್ತು ತಿದ್ದುಪಡಿಯನ್ನು ತರುತ್ತಿದ್ದೀರಿ. ಹಿಂದೆ ನಾನು ಇದೇ ಸದನದಲ್ಲಿ ಹೇಳಿದ್ದೆ. ಏನೆಂದರೆ by taking premium from the share croper State Government has become landlord. ಎಂದು ಮಾಜಿ ಭೂಮಾಲೀಕ ಬೆಳೆ ಪಾಲು ತೆಗೆದುಕೊಳ್ಳುತ್ತಿದ್ದ. ಆದರೆ ಅದಕ್ಕೆ ಬದಲು ಈ ಸರ್ಕಾರದವರು ಅವನಿಂದ ಗೇಣಿಯನ್ನು ತೆಗೆದುಕೊಳ್ಳುತ್ತಿದ್ದೀರಿ. ಆದ್ದರಿಂದ ನಾನು ಮಾನ್ಯ ಸಚಿವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ, ಈ ಪ್ರೀಮಿಯಂ ಕಟ್ಟತಕ್ಕ ರಿಯಾಯತಿ ಏನಿದೆ irrespective of the size of holding it should be applied to all tenants. ಇದನ್ನು ತಾವು ದಯವಿಟ್ಟು ಮಾಡಬೇಕು. ನಿಮ್ಮ ಅರೆ ಸಮಾಜವಾದಿ ಸ್ಥಿತಿಯಿಂದ ಪೂರ್ಣ ಸಮಾಜವಾದಿಗಳು ಆಗಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮತ್ತು 12 ಸಾವಿರದಿಂದ 50 ಸಾವಿರದ ವರೆಗೆ ಎಂದು ಒಂದು ತಿದ್ದುಪಡಿ ಇದೆ. I have been saying it is an unconstitutional provision in the Act. It directly violates Act.19 (1)(g)...

ಈ ದೇಶದಲ್ಲಿ ನಾವು ಜನರಿಗೆ ಏನು ಉದ್ಯೋಗ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆ ಅದನ್ನು ನೇರವಾಗಿ ಉಲ್ಲಂಘನೆ ಮಾಡುತ್ತಿದ್ದೇವೆ. ಆದ್ದರಿಂದದ ಈ 12 ಸಾವಿರ ಅಥವಾ 50 ಸಾವಿರ ಎಂಬುದು ಏನಿದೆ ಇದು ಅಪ್ರಸ್ತುತವಾಗುತ್ತದೆ. ಆದ್ದರಿಂದ ಇದನ್ನು ಸಂಪೂರ್ಣವಾಗಿ ರದ್ದುಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಅಷ್ಟೆ. ಮತ್ತೇನಿಲ್ಲ.

ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಉಪಾಧ್ಯಕ್ಷಿಣಿಯವರೆ, ಇವತ್ತು ಮಾನ್ಯ ಕಂದಾಯ ಸಚಿವರು ಈ ಭೂ ಸುಧಾರಣಾ ಕಾನೂನಿಗೆ ಏನು ತಿದ್ದುಪಡಿಯನ್ನು ತಂದಿದ್ದಾರೆ. ಇದನ್ನು ಸ್ವಾಗತಿಸುತ್ತಾ ನಾನು ಒಂದೆರಡು ಮಾತುಗಳನ್ನು ತಮ್ಮ ಅಪ್ಪಣೆ ಪಡೆದು ಹೇಳಬಯಸುತ್ತೇನೆ.

ಈ ಭೂ ಸುಧಾರಣಾ ಕಾನೂನಿಗೆ ಹಿಂದೆ ಅಂದರೆ 1972ರಿಂದ 1974ರ ಅವಧಿಯಲ್ಲಿ ಈ ಸದನದಲ್ಲಿ ಚರ್ಚೆಯಾಗುವಾಗ, ಈ ಸದನದ ಒಪ್ಪಿಗೆಯನ್ನು ಪಡೆಯತಕ್ಕ ಕಾಲದಲ್ಲಿ ನಾನೂ ಕೂಡ ಈ ಸದನದ ಒಬ್ಬ ಸದಸ್ಯನಾಗಿದ್ದೆ. ಮಾನ್ಯ ಖರ್ಗೆಯವರೂ ಈ ಸದನದ ಸದಸ್ಯರಾಗಿದ್ದರು. ಈ ಮಸೂದೆ ಈ ಸದನದ ಒಪ್ಪಿಗೆಯನ್ನು ಪಡೆಯುವಾಗ ನಾವೂ ನಮ್ಮ ಸ್ನೇಹಿತರೂ ಪ್ರಮುಖವಾದ ಪಾತ್ರವನ್ನು ವಹಿಸಿ ಅನೇಕ ಮಹತ್ತದ ಬದಲಾವಣೆಗಳನ್ನು ಮಾಡುವುದರಲ್ಲಿ ಯಶಸ್ವಿಯಾದೆವು. ಅದರ ಪ್ರತಿಫಲವಾಗಿಯೇ ಇವತ್ತು ಈ ಕಾನೂನು ಬಂದಿದೆ. ಇದು ಇಡೀ ರಾಜ್ಯದಲ್ಲಿ ಅತ್ಯಂತ ಪ್ರಗತಿದಾಯಕವಾದ ಕಾನೂನು, ಮತ್ತು ಉಳುವವನೇ ಭೂಮಿಯ ಒಡೆಯ ಎಂಬ ಸೂತ್ರ ಯಶಸ್ವಿಯಾಗಿ ಜಾರಿಗೆ ಬರುವುದಕ್ಕೆ ಅವಕಾಶವಿದೆ. ಇದನ್ನು ನಾನು ಬಹಳ ಹೆಮ್ಮೆಯಿಂದ ಹೇಳಬೇಕಾಗಿದೆ. ಈ ಕಾನೂನು ಈ ಸದನದ ಒಪ್ಪಿಗೆಗೆ ಚರ್ಚೆಯಾಗುವಾಗ ಈ ಸದನದಲ್ಲಿ ನಾವೂ ಇದ್ದೆವು ಎಂದು ಹೆಮ್ಮೆಯಿಂದ ಹೇಳಿಕೊಳ್ಳಬೇಕಾಗಿದೆ. ಇವತ್ತು ತಂದಿರತಕ್ಕ ಈ ತಿದ್ದುಪಡಿಯಲ್ಲಿ ಪ್ರಮುಖವಾಗಿ ಚರ್ಚೆಮಾಡಬೇಕಾದ್ದು ಎಂದರೆ ಕಲಂ ನಂ. 79 (ಎ).

ಇದರಲ್ಲಿ ವ್ಯವಸಾಯೇತರ ಕಸುಬಿನಿಂದ 12 ಸಾವಿರ ರೂಪಾಯಿಗಳ ಉತ್ಪತ್ತಿ, ಆದಾಯ ಇದ್ದವರಿಗೆ ಅವರಿಗೆ ಭೂಮಿಯನ್ನು ಹೊಂದಲಿಕ್ಕೆ ಅವಕಾಶವಿಲ್ಲವೆಂದು ಮೊದಲೇ ಕಾನೂನಿನಲ್ಲಿದೆ. ಆಗ ಕಾನೂನನ್ನು ತಂದ ಉದ್ದೇಶವೇನೆಂದರೆ, ಆಗ ದೇಶದಲ್ಲಿಯೆ ಪ್ರಚಲಿತವಾದ ಒಂದು ವಿಚಾರ ಇತ್ತು. ಅದು ಏನೆಂದರೆ ಒಬ್ಬ ವ್ಯಕ್ತಿಗೆ ಒಂದು ಕಸುಬು ಎಂದು. one man one profession. ಆವತ್ತಿನದಿವಸ ಅದು ಘೋಷಣೆಯಲ್ಲಿ ಮತ್ತು ಪ್ರಚಾರದಲ್ಲಿ ಬಂದಿತ್ತು. ಆ ಕಾರಣದಿಂದ ಆಗ ಈ ಒಂದು ಕಲಮನ್ನು ತರಬೇಕಾದಂಥ ಪರಿಸ್ಥಿತಿಗೆ ಬಂದಿದ್ದೆವು. ಆದರೆ ಇವತ್ತು ಏನಾಗಿದೆ ಎಂದರೆ ಇದು ಯಾರಿಗೆ ಅನ್ವಯ ಆಗಿದೆ ಅಂದರೆ ಯಾರಿಗೆ ಏನೂ ಇಲ್ಲವೋ, ಅವನಿಗೆ ಮಾತ್ರ ಅನ್ವಯ ಆಗಿದೆ. ಈ ಕಾನೂನನ್ನು ಯಶಸ್ವಿಯಾಗಿ ಮುರಿದಿದ್ದಾರೆ. ಎಷ್ಟು ಯಶಸ್ವಿಯಾಗಿ ಟಾರ್ಪೆಡೋ ಮಾಡಿದ್ದಾರೆ. ಎಂಬ ಬಗ್ಗೆ ಸರ್ವೇಮಾಡಿ ಮಾನ್ಯ ರೆವಿನ್ಯೂ ಮಂತ್ರಿಗಳು ನೋಡಬೇಕು. ಅದರಲ್ಲೂ ಮುಖ್ಯವಾಗಿ ಬೆಂಗಳೂರು ಸುತ್ತಮುತ್ತಲಿರತಕ್ಕಂಥ ಭೂಮಿಗಳನ್ನು ನೋಡಬೇಕು. ನಿರ್ಧಾಕ್ಷಿಣ್ಯವಾಗಿ ಈ ಸೆಕ್ಷನ್‌ನ್ನು ವಯಲೇಷನ್ ಆಗಿರುವ ಬಗ್ಗೆ ನಿರ್ಧಾಕ್ಷಣ್ಯಾವಾಗಿ ತನಿಖೆ ಮಾಡಿ ಆ ವರದಿಯನ್ನು ಸದನದಲ್ಲಿಟ್ಟರೆ ರಾಜ್ಯದ ಜನತೆಗೆ ಗೊತ್ತಾಗುತ್ತದೆ. ಎಷ್ಟರಮಟ್ಟಿಗೆ ಈ ಒಂದು ಪ್ರಗತಿದಾಯಕವಾದ ಕಾನೂನನ್ನು ಕೂಡ ಮುರಿದು ಹಣವುಳ್ಳವರು, ಅಧಿಕಾರವಿರತಕ್ಕಂಥವರು ಎಷ್ಟರಮಟ್ಟಿಗೆ ದುರುಪಯೋಗಪಡಿಸಿ ಕೊಡಿರುತ್ತಾರೆನ್ನತಕ್ಕಂಥದ್ದು ಬೆಳಕಿಗೆ ಬರುತ್ತದೆ. ಆ ಕೆಲಸವನ್ನು ತಾವು ಮಾಡಬೇಕು. ಇಷ್ಟಕ್ಕೆ ಒಪ್ಪಿಸಬೇಕಾದರೆ ಬಹಳ ಕಷ್ಟವಿದೆ ಎಂದು ಹೇಳಬಹುದು. ಆದರೆ ಎಲ್ಲರಿಗೂ ಕೂಡ ಗೊತ್ತಿದೆ ಏನೆಂದರೆ pulls and pressure ಎಂದು ಇರುತ್ತದೆ. ಅದನ್ನೆಲ್ಲಾ ಮೆಟ್ಟಿ ನಿಲ್ಲುವವರೇ ಉತ್ತಮ ಆಡಳಿಗಾರರಾಗಲಿಕ್ಕೆ ಸಾಧ್ಯ. ಅದು ಮಾಡದಿದ್ದರೆ ತಾವು ಉತ್ತಮ ಆಡಳಿತಗಾರರಾಗಲಿಕ್ಕೆ ಸಾಧ್ಯವಿಲ್ಲ. ನಿಮ್ಮ ಬೆನ್ನನ್ನು ನೀವು ತಟ್ಟಿಕೊಂಡರೂ ಸಹ ಅದರಿಂದ ಪ್ರಯೋಜನವಿಲ್ಲವೆಂದು ಹೇಳುತ್ತೇನೆ. ಬೆಂಗಳೂರು ನಗರ ಹಾಗೂ ಇತರೇ ನಗರಗಳ ಸುತ್ತಮುತ್ತಲಿರತಕ್ಕಂಥ ಭೂಮಿ ದುರುಪಯೋಗವಾಗಿದ್ದರೆ ಆ ರೀತಿ ದುರುಪಯೋಗವಾಗಿರತಕ್ಕಂಥ ಭೂಮಿಯನ್ನು ಈ ಕಾನೂನಿನ ಚೌಕಟ್ಟಿನಲ್ಲಿ ಅಂತಹ ಭೂಮಿಯನ್ನು ಸರ್ಕಾರಿ ತನ್ನವಶಕ್ಕೆ ತೆಗೆದುಕೊಳ್ಳಬಹುದು. ಇದರಿಂದ ಸಾವಿರಾರು ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಭೂಮಿ ಸರ್ಕಾರಕ್ಕೆ

ಸಿಕ್ಕುತ್ತದೆ. ಈ ಕಲಮನ್ನು ಮುರಿದಿರತಕ್ಕಂಥದ್ದರ ಪ್ರತಿಫಲದಿಂದ ಸರ್ಕಾರದ ವಶಕ್ಕೆ ಬರುತ್ತದೆ. ಇದರಿಂದ ಸರ್ಕಾರ ಹಣವನ್ನು ಮಾಡಬಹುದು. ಹೀಗಾಗಿ ಈ ದೇಶದಲ್ಲಿ ಯಾರಿಗಾದರೂ ಬಲ ಇದೆಯೇ might is right.ಎಂದು ಹೇಳುವಂತೆ ಬಲ ಇರತಕ್ಕಂಥವರು ಎಂದರೆ ದುಡ್ಡಿದ್ದವನೇ ದೊಡ್ಡಪ್ಪ, ಬಲಾಢ್ಯರು ಹಾಗೂ ಪ್ರಭಾವ ಇರತಕ್ಕಂಥವರು ಎಷ್ಟರಮಟ್ಟಿಗೆ ಈ ಕಾನೂನನ್ನು ಮುರಿದಿದ್ದಾರೆನ್ನತಕ್ಕಂಥದ್ದು ಗೊತ್ತಾಗುತ್ತದೆ. ಇವರು ನಮ್ಮ ರಾಜ್ಯವನ್ನು ಅಲ್ಲೋಲಕಲ್ಲೋಲ ಮಾಡಿರತಕ್ಕಂಥದ್ದು ತಮಗೆ ಗೊತ್ತಿರತಕ್ಕಂಥ ವಿಚಾರ.

ಬೆಂಗಳೂರು ಸುತ್ತಮುತ್ತಲಿರತಕ್ಕಂಥ ಗೃಹನಿರ್ಮಾಣ ಸಹಕಾರಿ ಸಂಘಗಳ ವ್ಯವಹಾರ ಹತ್ತುವರೆ ಸಾವಿರ ಎಕರೆ ಭೂಮಿ ಯಾವ ರೀತಿ ಏನೇನು ಆಗಿದೆ ಎಂಬುದರ ಬಗ್ಗೆ ವಿಚಾರಕ್ಕೆ ನಾನು ಹೋಗುವುದಿಲ್ಲ. ಇವತ್ತು ಅವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ. ಆಗಿರತಕ್ಕಂಥ ಲೋಪದೋಷಗಳು ಏನಿದೆ, ಗೃಹನಿರ್ಮಾಣ ಸಹಕಾರಿ ಸಂಘಗಳವರು ಸಹ ಭೂಸುಧಾರಣಾ ಕಾನೂನನ್ನು ವಯೇಲೇಟ್ ಮಾಡಿದ್ದಾರೆ. ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳದೆ ಮಾನ್ಯ ಖರ್ಗೆಯವರು ಗೊಮ್ಮಟೇಶ್ವರನ ರೀತಿಯಲ್ಲಿ ಅಲುಗಾಡದೆ ಕುಳಿತಿದ್ದಾರೆ. ಬಟ್ಟೆಹಾಕಿರತಕ್ಕಂಥ ಗೊಮ್ಮಟೇಶ್ವರನ ರೀತಿಯಲ್ಲಿ ಕುಳಿತಿದ್ದಾರೆ. ಏತಕ್ಕೆ ನಿಮಗೆ ಅವರ ಜೊತೆಯಲ್ಲಿ ನಂಟಸ್ತಿಕೆ. ನೀವು ಕೂಡ ಅವರ ನಂಟರಾಗಿದ್ದೀರಿ. ಇವತ್ತು ನಿಮಗೆ ಅಧಿಕಾರವಿದ್ದರೂ ಯಾವುದೇ ಕ್ರಮ ತೆಗೆದುಕೊಳ್ಳದಿರುವುದು ಒಂದು ದುರಾದೃಷ್ಟವಾಗಿದೆ. ನಾನು ಈಗಾಗಲೇ ಹೇಳಿದಹಾಗೆ ದುಡ್ಡಿದ್ದವನೇ ದೊಡ್ಡಪ್ಪ ಎನ್ನುವ ನೀತಿಯನ್ನು ನೀವೂ ಕೂಡ ಪಾಲಿಸಿಕೊಂಡು ಬರುತ್ತಿದ್ದೀರಿ.

ಈಗ ಇರತಕ್ಕ ಕಾನೂನನ್ನು ಬಳಕೆ ಮಾಡತಕ್ಕದ್ದರಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ. ವಿಫಲರಾಗಿದ್ದರೂ ಕೂಡ ಇವತ್ತು ಇರತಕ್ಕ ಕೆಲವು ಒಳ್ಳೆಯ ಅಂಶಗಳೇನಿವೆ, 12 ಸಾವಿರದಿಂದ 50 ಸಾವಿರ ರೂಪಾಯಾಗಳಿಗೆ ಏರಿಸಿರತಕ್ಕದ್ದು ಸರಿ, ಅದನ್ನು ನಮ್ಮ ಸ್ನೇಹಿತರು ತಿಳಿಸಿದಹಾಗೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಸೆಕ್ಷನ್ ಬೇಕೋ ವಿತ್‌ಡ್ರಾ ಮಾಡೋಣವೋ ಹೇಗೆ?

ಶ್ರೀ ಸಿ. ಬೈರೇಗೌಡ : ವಿತ್‌ಡ್ರಾ ಮಾಡಿ. ಮಾಡಿದರೆ ಸಂತೋಷ. ವಿತ್‌ಡ್ರಾ ಮಾಡದಿದ್ದರೆ ಕನಿಷ್ಟ ಒಂದು ಲಕ್ಷ ರೂಪಾಯಿವರೆಗೆ ಏರಿಸಬೇಕಾದುದು ಅವಶ್ಯಕತೆ ಇದೆ. ಇದಕ್ಕಿಂತ ಮುತುವರ್ಜಿಯನ್ನು ಈ ಸೆಕ್ಷನ್ ಎಲ್ಲೆಲ್ಲಿ ವಯಲೇಷನ್ ಆಗಿದೆ ಅದು ಬೆಂಗಳೂರು ಸುತ್ತಮುತ್ತ ಆಗಿರಬಹುದು, ಆದರೆ ಗ್ರಾಮಾಂತರ ಪ್ರದೇಶದಲ್ಲಿ ಈ ಕಲಮಿನ ದುರುಪಯೋಗ ಆಗಿಲ್ಲ ಎಂದು ಧೈರ್ಯವಾಗಿ ಇವತ್ತು ನಾನು ಹೇಳಬಲ್ಲೆ. ಏನಾದರೂ ಆಗಿದ್ದರೆ ಬೆಂಗಳೂರು, ಮೈಸೂರು ಇಂಥ ದೊಡ್ಡದೊಡ್ಡ ನಗರ ಪ್ರದೇಶಗಳ ಸುತ್ತಮುತ್ತ ಇರತಕ್ಕವರು, ಹಣ ಇರತಕ್ಕವರು ಈ ಕಾನೂನನ್ನು ಮುರಿದಿದ್ದಾರೆ. ಆದ್ದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತಾ ಮತ್ತೊಮ್ಮೆ ಈ ಕಾನೂನನ್ನು ಸ್ವಾಗತಿಸಿ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಅಧ್ಯಕ್ಷಿಣಿಯವರೆ, ಈ ಭೂಸುಧಾರಣಾ ಕಾನೂನಿಗೆ ತಂದಂಥ ಈ ತಿದ್ದುಪಡಿ ಮಸೂದೆ ಪ್ರಗತಿದಾಯಕವಾಗಿದೆ.

ವಿಶೇಷವಾಗಿ ನಮ್ಮ ಮುಖ್ಯಮಂತ್ರಿಗಳನ್ನು ಮತ್ತು ಕಂದಾಯ ಸಚಿವರನ್ನು ಅಭಿನಂದಿಸುತ್ತೇನೆ.

ಶ್ರೀ ಎಚ್. ಏಕಾಂತಯ್ಯ : ಒಳ್ಳೆಯ ಅವಕಾಶ ಸಿಕ್ಕಿದೆ, ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ : ನಾನು ಮಾಡದೆ ಮತ್ತೆ ಯಾರು ಮಾಡಬೇಕು?

ಶ್ರೀ ಬಿ.ಎಸ್. ಯಡಿಯೂರಪ್ಪ : ಜಿಲ್ಲಾ ಪರಿಷತ್ ತಿದ್ದುಪಡಿಗೆ ಸ್ವಾಗತ ಮಾಡುವ ಒಂದು ಸೌಭಾಗ್ಯ ಕಳೆದುಕೊಂಡಿರಿ. ಇದಕ್ಕಾದರೂ ಒಂದು ಅವಕಾಶ ಸಿಕ್ಕಿದೆ ನಿಮಗೆ.

ಶ್ರೀ ಕಾಗೋಡು ತಿಮ್ಮಪ್ಪ : ಏಕೆಂದರೆ ಭೂಸುಧಾರಣಾ ಕಾನೂನು ತಿದ್ದುಪಡಿ ಮಾಡುವ ಬಗ್ಗೆ ಜಂಟಿ ಸಲಹಾ ಸಮಿತಿಯನ್ನು 1972ರಲ್ಲಿ ಮಾಡಿದರು. ಆ ವರದಿಯನ್ನು ಕೊಡತಕ್ಕ ಕಾಲದಲ್ಲಿ ಈ 10 ಎಕರೆವರೆಗಿನ ಭೂಮಿಯನ್ನು ಹೊಂದಿರತಕ್ಕ ಗೇಣೇದಾರರಿಗೆ ಪರಿಹಾರ ರದ್ದುಪಡಿಸಬೇಕು ಎಂದು ಹೇಳಿ ನಾನು ಒಂದು ಡಿಸೆಂಟಿಂಗ್ ನೋಟನ್ನು ಕೂಡ ಕೊಟ್ಟಿದ್ದೆ. ಅದು 1972ರಿಂದ 1990ನೇ ಇಸವಿಯವರೆಗೆ ಪೂರ್ಣ ಆಗಬೇಕಾದ ಸನ್ನಿವೇಶ ಬಂತು. ಆದರೆ ನಮ್ಮ ಗುರಿ ಈಗಲಾದರೂ ಮುಟ್ಟಿದೆಯಲ್ಲ ಎಂಬು ಕಾರಣಕ್ಕಾಗಿ ಇವೊತ್ತು ಸಂತೋಷವಾಗಿದೆ. ಏಕೆಂದರೆ ಮಂತ್ರಿಮಂಡಲ ಈ ತೀರ್ಮಾನ ಮಾಡಿದ ಮಾರನೇ ದಿವಸ ಮಾನ್ಯ ಮುಖ್ಯಮಂತ್ರಿಗಳಿಗೆ ಹೋಗಿ ಅಭಿನಂದನೆ ಕೂಡ ಸಲ್ಲಿಸಿದೆ. ಅವರು ಮುಖ್ಯಮಂತ್ರಿಗಳಾದಾಗ ನಾನು ಹೋಗಿ ಅಭಿನಂದನೆ ಸಲ್ಲಿಸಿರಲಿಲ್ಲ. ಆದರೆ ಈ ತೀರ್ಮಾನ ಮಾಡಿದ ದಿವಸ ಅಭಿನಂದನೆ ಸಲ್ಲಿಸಿದ್ದೆ.

ಶ್ರೀ ಸಿ. ಬೈರೇಗೌಡ : ಮುಖ್ಯವಾಗಿ ಸೊರಬ ಮತ್ತ ಸಾಗರ ತಾಲ್ಲೂಕುಗಳಲ್ಲಿ ಐದ್ಯೆದು ಕೋಟಿ ರೂಪಾಯಿಗಳಷ್ಟು ರಿಯಾಯಿತಿ ರೈತರಿಗೆ ಸಿಗುತ್ತದೆ ಎಂಬ ಮಾತು ಪ್ರಚಲಿತವಾಗಿದೆ. ಅದು ನಿಜವೇ?

ಶ್ರೀ ಕಾಗೋಡು ತಿಮ್ಮಪ್ಪ ; ಆದ್ದರಿಂದ ಅವರಿಗೆ ಅಭಿನಂದನೆ ಸಲ್ಲಿಸಿದ್ದೆ. ಕಾರಣ ಏನೆಂದರೆ ನಮ್ಮ ಗುರಿ ಇಷ್ಟು ವರ್ಷದ ಮೇಲಾದರೂ....

ಶ್ರೀ ಪಿ.ಜಿ.ಆರ್. ಸಿಂಧ್ಯ : ಮುಖ್ಯಮಂತ್ರಿಗಳಾದಾಗ ಅಭಿನಂದನೆ ಸಲ್ಲಿಸಿರಲಿಲ್ಲ ಎಂದು ಹೇಳಿದಿರಿ.

ಶ್ರೀ ಕಾಗೋಡು ತಿಮ್ಮಪ್ಪ : ನಾನು ನಂತರ ಖಂಡಿತವಾಗಿ ಹೋಗಿದ್ದೆ. ಇರುವ ವಿಚಾರ ಇದು. ಏಕೆಂದರೆ ಆತ್ಮೀಯವಾದ ಕಾರ್ಯಕ್ರಮ ಅನುಷ್ಠಾನಕ್ಕೆ ಬಂದಾಗ ಸ್ವಾಭಾವಿಕವಾಗಿ ಸಂತೋಷವೂ ಬರುತ್ತದೆ, ಒಂದು ಹೋರಾಟದಲ್ಲಿ ಗೆಲುವು.....

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಅದನ್ನು ಕೇಳುತ್ತಾ ಇರಲಿಲ್ಲ. ನೀವು ಏನು ಹೇಳಿದಿರಿ ಎಂದರೆ ಅವರು ಮುಖ್ಯಮಂತ್ರಿಗಳಾದಾಗಲೂ ಅವರನ್ನು ಅಭಿನಂದಿಸಿರಲಿಲ್ಲ, ಇದನ್ನು ಮಾಡಿದಮೇಲೆ ಅಭಿನಂದಿಸಿದೆ ಎಂದು ಹೇಳಿದಿರಿ. ಏತಕ್ಕೆ ಮೊದಲು ಅಭಿನಂದಿಸಲಿಲ್ಲ ಎಂದು ಕೇಳಿದೆ ನಾನು ಅಷ್ಟೆ.

ಶ್ರೀ ಕಾಗೋಡು ತಿಮ್ಮಪ್ಪ : ಅದು ಪಕ್ಷದಲ್ಲಿ ಆಯ್ಕೆಯಾಯಿತು, ತೀರ್ಮಾನವಾಗಿದೆ. ಆದರೆ ಇದಕ್ಕೆ ಒಂದು ಸಿದ್ಧಾಂತದ ಹಿನ್ನೆಲೆಯಲ್ಲಿ ಇದೆ. ಒಂದು ಹೋರಾಟದ ಘಟ್ಟವನ್ನು ಮುಟ್ಟಿದಾಗ ನನಗೆ ಆಗುವಷ್ಟು ಸಂತೋಷ ನಿಮಗೆ ಆಗುವುದಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ ಗೇಣೇದಾರರ ಹೋರಾಟ

ಪ್ರಾರಂಭವಾದಾಗ ನಿಮ್ಮಲ್ಲಿ ಅಂಥ ಸನ್ನಿವೇಶ ಉಂಟಾಗಿರಲಿಲ್ಲ. ನಮಗೆ ಆ ಸನ್ನಿವೇಶ ಇತ್ತು. ಆ ಹೋರಾಟದಿಂದ ಬರಬೇಕಾಗಿತ್ತು. ಆಗ ಸ್ವಾಭಾವಿಕವಾಗಿ ಇಂಥ ಒಂದು ತೀರ್ಮಾನ ಸರ್ಕಾರದಿಂದ ಆದಾಗ ನಾವು ಸಂತೋಷ ಪಡಲೇಬೇಕು. ಯಾರು ಇದಕ್ಕೆ ಜವಾಬ್ದಾರರೋ, ಕಾರಣಕರ್ತರೋ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾದುದು ನಮ್ಮ ಧರ್ಮ. ಆದ್ದರಿಂದ ಶ್ರೀಮಾನ್ ಮಲ್ಲಿಕಾರ್ಜುನ ಖಾರ್ಗೆಯವರು ಕಂದಾಯ ಮಂತ್ರಿಗಳಾಗುವುದಕ್ಕೂ ಶ್ರೀಮಾನ್ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗುವುದಕ್ಕೂ, ಗೇಣೀದಾರರಿಗೆ ಪೂರ್ಣ ರಿಯಾಯಿತಿ ಸಿಗುವುದಕ್ಕೂ ಒಂದು ಸಂಬಂಧ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸೊರಬ, ಸಾಗರ ತಾಲ್ಲೂಕಿನಲ್ಲಿ ಗೇಣಿದಾರರಿಂದ ಹಣ ವಸೂಲಿ ಮಾಡದಂಗೆ ಪ್ರಭಾವಯುತವಾಗಿ ತಡೆದಿರಿ ಎಂಬುದನ್ನು ಒಪ್ಪಿಕೊಳ್ಳೋಣ. ಅದಕ್ಕೆ ಧನ್ಯವಾದಗಳು. ಆದರೆ ಇಡೀ ರಾಜ್ಯದಲ್ಲಿ ಬಡಗೇಣಿದಾರದಿಂದ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ, ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾದ ಮೇಲೆ ಸುಮಾರು 50 ಕೋಟಿ ರೂಪಾಯಿ ವಸೂಲಿ ಮಾಡಿದ್ದಾರಲ್ಲಾ, ಆ ದುಡ್ಡನ್ನು ವಾಪಸ್ಸು ಕೊಡಿಸಿದರೆ ನಿಮ್ಮ ಕಳಕಳಿಗೆ ಅರ್ಥ ಇದೆ ಎಂದು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಹಚ್ಚಿದಂತೆ ಆಗುವುದಿಲ್ಲವೇ? ಇದನ್ನು ತಾವು ಒಪ್ಪುತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸದಸ್ಯರು 50 ಕೋಟಿ ವಸೂಲಿ ಮಾಡಿದ್ದೇವೆಂದು ಹೇಳಿದ್ದಾರೆ. ಇದು ಸರಿಯಲ್ಲ. ನಮ್ಮ ಇನ್‌ಫರ್ಮೇಷನ್ ಪ್ರಕಾರ before 31.3.1990 only Rs. 9.38 crores have been collected from tenants whose holding is not less than 10 acres of D class land.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಯಡಿಯೂರಪ್ಪನವರು ಇದರ ಲಾಭ ಎಲ್ಲಾ ಶಿಕಾರಿಪುರ, ಸೊರಬಾಕ್ಕೆ ಸಿಗುತ್ತದೆಂದು ಹೇಳಿದ್ದಾರೆ. ಹಾಗೂ ಬೇರೆ ಕಡೆ ಸಿಗುವುದಿಲ್ಲ ಎಂದು ಹೇಳಿದ್ದಾರೆ. ಇವರಿಗೆ ಇತಿಹಾಸದ ಸ್ಮರಣೆಯನ್ನು ಮಾಡಿಕೊಡುತ್ತೇನೆ, ಕರ್ನಾಟಕ ರಾಜ್ಯದಲ್ಲಿ ಮೊದಲ ಬಾರಿಗೆ ಗೇಣಿ ರೈತರ ಹೋರಾಟ ಪ್ರಾರಂಭ ಆದುದು ಸಾಗರದಲ್ಲಿ, ಆ ಹೋರಾಟದಲ್ಲಿ ಸಕ್ರೀಯವಾಗಿ ಪಾಲ್ಗೊಂಡ ಗೇಣಿದಾರ ರೈತರು ಸೊರಬ, ಸಾಗರ, ಹೊಸನಗರ, ತೀರ್ಥಹಳ್ಳಿಯವರು. ಅವರ ನೇತೃತ್ವವನ್ನು ವಹಿಸಿದವರು ದಿವಂಗತ ಗೋಪಾಲಗೌಡರು. ಆಗ ಗೇಣಿದಾರರಿಗೆ ಸ್ಫೂರ್ತಿ ಕೊಡತಕ್ಕವರು ಅಂದಿನ ಕಂದಾಯ ಸಚಿವರಾಗಿದ್ದ ಕಡಿದಾಳ್ ಮಂಜಪ್ಪನವರು. ಇಂತಹ ನಾಯಕರುಗಳು ಆ ಪ್ರದೇಶದಲ್ಲಿ ಹುಟ್ಟಿ ಬಂದ ಕಾರಣಕ್ಕಾಗಿ ಆ ಹೋರಾಟ ಇವತ್ತೂ ಜ್ವಲಂತವಾಗಿ ಉಳಿತು. ಆ ಉಳಿಕೆಯಿಂದ ಇವತ್ತು ಗೇಣಿ ಶಾಸನವನ್ನು ತಂದು ಈ ಒಂದು ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗಿದೆ. ಬಹುಶಃ ಶ್ರೀಮಾನ್ ಯಡಿಯೂರಪ್ಪನವರು ಇನ್ನೂ ಶಿಕಾರೀಪುರ ತಾಲ್ಲೂಕಿಗೆ ಬಂದಿರಲಿಲ್ಲ, ಆ ಕಾಲದಲ್ಲಿ ಶಿಕಾರಿಪುರ ತಾಲ್ಲೂಕಿನಲ್ಲಿ ಬಹುಶಃ ನಮ್ಮಷ್ಟು ಸಂಘಟನೆ ಆಗಿದ್ದರೆ ಇವತ್ತು ಎಷ್ಟು ಗೇಣಿ ರೈತರಿಗೆ ಜಮೀನು ಒದಗಿಸಲಾಗುತ್ತದೋ ಆದಕ್ಕಿಂತಾ 4ರಷ್ಟು ಭೂಮಿಯನ್ನು ನಿಮ್ಮಲ್ಲಿ ಸಿಗುತ್ತಿತ್ತು. ನಿಮ್ಮ ತಾಲ್ಲೂಕಿನ ಬೇಗೂರಿನಲ್ಲಿ ಇನಾಂ ಗೇಣಿ ರೈತರು ಇದ್ರಲ್ಲಾ ಅವರಿಗೆ ನೂರಕ್ಕೆ ನೂರು ಇನಾಮ್ ಗೇಣಿ ರೈತರಿಗೆ ಭೂಮಿಯನ್ನು ಕೊಡುವುದಕ್ಕೆ ಆಗಲಿಲ್ಲ. ಏಕೆಂದರೆ ಅವತ್ತು ಅವರ ಪರವಾಗಿ ವಕಾಲತ್ತು ಮಾಡುವ ಜನರು ನಮಗೆ ಸಿಗುತ್ತಿರಲಿಲ್ಲ. ಅವರ ಹೋರಾಟ ಇರಲಿ, ನಾವು ಬೇಗೂರಿಗೆ ಹೋದರೆ ಕುಡಿಯುವುದಕ್ಕೆ

ನೀರು ಸಹಾ ಸಿಗುತ್ತಿರಲಿಲ್ಲ. ಆ ಕಾಲದಲ್ಲಿ ಬಹುಶಃ ನಿಮ್ಮ ತರಹ ನಾಯಕರು ಆ ಕಾಲದಲ್ಲಿ ನಮ್ಮಂತೆ ಸಂಘಟನೆ ಮಾಡಿದ್ದರೆ ತಮ್ಮ ತಾಲ್ಲೂಕಿನಲ್ಲಿ ಗೇಣಿದಾರರಿಗೆ ಎಷ್ಟು ದೊರೆಯುತ್ತಿದೆಯೋ ಅದಕ್ಕಿಂತಾ ನಾಲ್ಕು ಪಟ್ಟು ಶಿಕಾರಿಪುರದಲ್ಲಿ ಸಿಗುತ್ತಿತ್ತು. 1952ರಲ್ಲಿ ಎಷ್ಟು ಜನರು ಇದ್ದರು ಎಂದು ಟ್ರೆನ್ನಿ ಕ್ಲಾಫ್ ರಿಜಿಸ್ಟರ್ ತೆಗೆದು ನೋಡಿ. ಅವತ್ತಿನಿಂದ 72ರಲ್ಲಿ ಹೊಸ ತಿದ್ದುಪಡಿಯನ್ನು ಭೂಸುಧಾರಣೆ ಕಾನೂನಿಗೆ ತಂದು ಜಾರಿಗೆ ಕೊಡುವವರೆಗೆ ಎಷ್ಟು ಗೇಣಿರೈತರು ಇದ್ದರು ಎಂದು ತೆಗೆದು ನೋಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಸದಸ್ಯರು ಹೇಳಿದಹಾಗೆ ಗೇಣಿದಾರರ ಹೋರಾಟ ಕಾಲದಲ್ಲಿ ನಾನು ಶಿಕಾರಿಪುರದಲ್ಲಿ ಇರಲಿಲ್ಲ, ನಾನು ಇತ್ತೀಚೆಗೆ ಬಂದೋನೆಂಬುದನ್ನು ಒಪ್ಪುತ್ತೇನೆ. ಆದರೆ ಒಂದು ಮಾತನ್ನು ಅವರು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇತ್ತೀಚೆಗೆ ಸಾಗರ, ತೀರ್ಥಹಳ್ಳಿ, ಶಿಕಾರಿಪುರ ಸೊರಬ ಕೂಡಾ ಸೇರಿದಂತೆ ಬಡ ಗೇಣಿದಾರರಿಂದ ಬಲಾತ್ಕಾರದಿಂದ ಈ ಹಣವನ್ನು ವಸೂಲಿ ಮಾಡುವ ಸಂದರ್ಭದಲ್ಲಿ ತೀರ್ಥಹಳ್ಳಿಗೆ ಬಂದು, ಸಾಗರಕ್ಕೆ ಬಂದು, ಸಾವಿರಾರು ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಬಂದುನಿಂತು, ಧರಣಿ ಕೂತು, ಬಲಾತ್ಕಾರವಾಗಿ ಹಣ ವಸೂಲಿ ಆಗಬಾರದು, ಅದನ್ನು ಕೊಡಬೇಡಿ ಎಂದು ನಾನು ಹೋರಾಟ ಮಾಡಿದ ಕಿಂಚಿತ್ತು ಸೇವೆಯನ್ನು ಮಾಡಿರುವುದನ್ನಾದರೂ ತಾವು ಒಪ್ಪುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮಂಥ ನಾಯಕರು ಆ ಕಾಲದಲ್ಲಿ ಇದ್ದಿದ್ದರೆ ನಿಮ್ಮ ಗೇಣಿದಾರರನ್ನು ರಕ್ಷಿಸಬಹುದಾಗಿತ್ತು. ಮತ್ತು ಅವರಿಗೆ ಭೂಮಿ ಕೊಡಬಹುದಾಗಿತ್ತು. ಇವತ್ತು ವಸೂಲಿ ಆಗಿದೆ. ಕಾರಣ ಏನೆಂದರೆ ಈ ವಾದವನ್ನು ಒಪ್ಪುವ ಜನ ಇಲ್ಲ. ಮಾನ್ಯ ಚಂದ್ರೇಗೌಡರು ಇಲ್ಲಿ ಇದ್ದಾರೆ. ಮಾನ್ಯ ಬೊಮ್ಮಾಯಿಯವರು ಕಂದಾಯ ಸಚಿವರು ಆಗಿದ್ದಾಗ ಅವರ ಹತ್ತಿರ ಹೋಗಿ ನಾನು ಕೈಮುಗಿದು ಕೇಳಿದೆ. ಬೊಮ್ಮಾಯಿಯವರೇ 84ರಲ್ಲಿ ಏನು ನೀವು ಸುತ್ತೋಲೆ ಹೊರಡಿಸಿದ್ದೀರಿ ಅದರಿಂದ ಜನರಿಗೆ ಮೋಸ ಮಾಡಿದ್ದೀರಿ, ಜನರಿಗೆ ವಂಚನೆ ಮಾಡುತ್ತಿದ್ದೀರಿ, ದಯಮಾಡಿ ತಿದ್ದುಪಡಿ ಮಾಡಿ ಎಂದು ಅವರ ಮನೆಗೆ ಹೋಗಿ ಅವರ ಹತ್ತಿರ ಕೂತು ಎಲ್ಲಾ ಚರ್ಚೆ ಮಾಡಿ ಹೇಳಿದರೂ ಕೂಡಾ ತಿದ್ದುಪಡಿ ಮಾಡುವುದಕ್ಕೆ ಅವರ ಕೈಯಲ್ಲಿ ಆಗಲಿಲ್ಲ, ಆದರೆ ಇವತ್ತು ಈ ಹೋರಾಟದ ಪರಂಪರೆ ಇರುವ ಕಾರಣಕ್ಕಾಗಿ.....

+ ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೇ, Let me put the records straight. ಈಗ ನೀವು ಹೇಳಿದ್ದಕ್ಕೆ ನಾನು ವಾದ ಮಾಡುತ್ತಿಲ್ಲ. ಆ ಕಾಲಕ್ಕೆ ಈ ಶಾಸನ ಹೆಚ್ಚೂ ಕಮ್ಮಿ ಡ್ರಾಫ್ಟ್ ಆಗಿತ್ತು. Let me put the records straight. It is about to be brought before the House.

ಇಲ್ಲಿ ಪ್ರಶ್ನೆ ಏನು ಬಂತು ಎಂದರೆ ಈ ಒಂದು ಭೂ ಅಭಿವೃದ್ಧಿ ಬ್ಯಾಂಕ್‌ಗಳಲ್ಲಿ ಯಾವ ಗೇಣಿದಾರರು ಸಾಲವನ್ನು ತಮ್ಮ ಭೂಮಿಗಾಗಿ ಮಾಡಿದ್ದರು ಅಲ್ಲಿ ಕಟ್ಟಬೇಕಾದಂತಹ ಹಣವನ್ನು ಏನು ಕಟ್ಟಿದ್ದಾರೆ ಅವರಿಗೆ ತೊಂದರೆಯಾಗುತ್ತದೆ. ಇದರಿಂದ ಅವರಿಗೂ ಎಕ್ಸೆಂಪ್ಷನ್ ಕೊಡಿ ಎಂಬ ಪ್ರಸ್ತಾಪ ಬಂದದ್ದರಿಂದ, ಕೊಟ್ಟವರಿಗೆ ಪುನಃ ಸರಕಾರದಿಂದ ವಾಪಸ್ಸು ಕೊಡತಕ್ಕಂತಹ ಒಂದು ದ್ವಂದ್ವದಿಂದ ನಿಲ್ಲಿತೇ ಹೊರತು ಈ ಮಸೂದೆಯನ್ನು ತರುವುದಕ್ಕೆ ಹಿಂದಿನ ಸರಕಾರ ಪ್ರಯತ್ನ ಮಾಡಲಿಲ್ಲವೆಂದು ಆಪಾದನೆ ಮಾಡಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಎಲ್ಲಿಯವರೆಗೆ ಹೋಯಿತೆಂದರೆ ವೀರೇಂದ್ರ ಪಾಟೀಲರ ಸರಕಾರ ಅಧಿಕಾರಕ್ಕೆ ಬಂದ ತಕ್ಷಣ ಬಡ ಗೇಣಿದಾರರು ಅಂದರೆ ಯಾರು ಶಿಕಾರಿಪುರದಲ್ಲಿ ದುಡ್ಡು ಕಟ್ಟಲಿಲ್ಲ ಅವರಿಂದ ಹಣ ವಸೂಲು ಮಾಡಿದರು. ವಿರೂಪಾಕ್ಷಪ್ಪ ಎಂಬುವವರು ಇಲ್ಲಿ ಈಗ ಕಾರ್ಯದರ್ಶಿಯಾಗಿದ್ದಾರೆ. ಅವರು ಸುಮಾರು 3-4 ಲಕ್ಷ ರೂಪಾಯಿಯನ್ನು ಬಡ ಗೇಣೀದಾರರಿಂದ ನಮ್ಮ ಶಿಕಾರಿ ಪುರದಲ್ಲಿ ವಸೂಲು ಮಾಡಿದರು. ಅಷ್ಟೇ ಅಲ್ಲ ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ಯಾವ ಬಡ ಗೇಣೀದಾರರು ಹಣವನ್ನು ಇನ್ನೂ ಕಟ್ಟಿರಲಿಲ್ಲ ಅಲ್ಲಿ ಆ ಜಮೀನನ್ನು ತೆಗೆದುಕೊಳ್ಳುವಂತಹ ಪ್ರಯತ್ನ ಮಾಡಿದಾಗ ಗೇಣಿದಾರರು ಕೊನೇ ಪಕ್ಷ ಆ ಜಮೀನುಗಳನ್ನು ಉಳಿಸಿಕೊಳ್ಳಬೇಕು ಎಂಬ ದೃಷ್ಟಿಯಿಂದ ಕೆಲವರು ಹಣ ಕಟ್ಟಿದರು. ಇಂತಹ ಪರಿಸ್ಥಿತಿಯಲ್ಲಿ ಆ ಬಡವ ಏನು ಮಾಡಬೇಕು. ಅಂತಹ ಪಾಪದ ಕೆಲಸವನ್ನು ನಿಮ್ಮ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಮಾಡಿತು. ಆದರಿಂದ ಈಗ ಮೋಕ್ಷ ಮಾಡಿಕೊಳ್ಳುವುದಕ್ಕೆ ಈಗ ಹೊರಟಿದ್ದೀರಾ? ತಾವು ಪ್ರಭಾವೀ ವ್ಯಕ್ತಿ ಇದ್ದೀರಿ, ಇಷ್ಟು ದೊಡ್ಡ ಸಂಖ್ಯೆಯಲ್ಲಿ ನಿಮ್ಮ ಪಕ್ಷ ಬಂದಿದೆ ಮೊನ್ನೆ ಬಲಾತ್ಕಾರದಿಂದ ಏನು ವಸೂಲು ಮಾಡಿದಿರಿ. ಅದನ್ನು ವಾಪಸ್ಸು ಮಾಡಿ. ಯಡಿಯೂರಪ್ಪನವರೇ ನಮಗೆ ಹಿಂದಿನದು ಗೊತ್ತಿಲ್ಲ, ಒಂಭತ್ತವರೆ ಕೋಟಿ ಏನು ವಸೂಲು ಮಾಡಿದ್ದೇವೆ ಅದನ್ನು ವಾಪಸ್ಸು ಕೊಡುತ್ತೇವೆಂದು ಮಾನ್ಯ ಕಾಗೋಡು ತಿಮ್ಮಪ್ಪನವರು ನಮ್ಮ ಪರವಾಗಿ ಸರಕಾರಕ್ಕೆ ಹೇಳುವಂತಹ ಸಾಹಸ ಮಾಡಿದರು ಅವರು ಮನಸ್ಸನ್ನು ಒಲಿಸುವಂತಹ ಕೆಲಸ ಮಾಡಿದರು ಎಂದು ನಿಮ್ಮ ಹೆಸರನ್ನು ಇಡೀ ಶಿವಮೊಗ್ಗದಲ್ಲಿ ಹೇಳಿಕೊಂಡು ಬರುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಚಂದ್ರೇಗೌಡರು ಹೇಳಿದ ಪ್ರಕಾರ ನಾನು ಆಪಾದನೆ ಮಾಡುತ್ತಿಲ್ಲ. 84ನೇ ಇಸವಿಯಲ್ಲಿ ತಾವು ಒಂದು ಸುತ್ತೋಲೆ ಹೊರಡಿಸಿದ್ದಿರಿ. ಆ ಸುತ್ತೋಲೆ ಪ್ರಕಾರ 10 ಎಕರೆ 'ಡಿ' ವರ್ಗದ ಜಮೀನು ಅಥವಾ ಅದಕ್ಕೆ ತತ್ಸಂಬಂಧವಾದಂತಹ ಜಮೀನು ಹೊಂದಿರುವಂತಹ ಗೇಣಿ ರೈತರು ಕಟ್ಟುವಂತಹ ಪ್ರೀಮಿಯಂ ಅನ್ನು ವಸೂಲು ಮಾಡಬಾರದೆಂದು ಆದೇಶ ಇತ್ತು. ಆ ಸುತ್ತೋಲೆ ಆಧಾರದ ಮೇಲೆ 85 ರಲ್ಲಿ ಭೂ ಸುಧಾರಣಾ ಕಾನೂನಿಗೆ ತಿದ್ದುಪಡಿಯನ್ನು ತಂದಿರಿ. ಆ ತಿದ್ದುಪಡಿಯನ್ನು ತರುವಾಗ ಈ ಸುತ್ತೋಲೆಗೆ ತದ್‌ವಿರುದ್ಧವಾದಂತಹ ರೀತಿಯಲ್ಲಿ ತಿದ್ದುಪನ್ನು ತಂದಿರಿ ಅದರಲ್ಲಿ ಆಗ ಏನು ಮಾಡಿದಿರಿ ಎಂದರೆ Instalment fall due on or after 1984 November. ಆಗ ನಾನು ಏನು ಹೇಳಿದೆ ಅಂದರೆ, ಸೆಕ್ಷನ್ 53 ಕ್ಲಾಸ್ 1 ಪ್ರಕಾರ ಎಲ್ಲಾ ಗೇಣಿ ರೈತರು ತಾವು ಕಟ್ಟುವಂತಹ ಪ್ರೀಮಿಯಂ 2 ಸಾವಿರ ರೂಪಾಯಿ ಮೊದಲು ಕೊಡಬೇಕು ಆದಕ್ಕೆ ಯಾವ ಕಂತುಗಳೂ ಇಲ್ಲ, ಉಳಿದಂತಹ ಹಣವನ್ನು ಕಂತಿನಲ್ಲಿ ಕೊಡಬಹುದು. ಇದರಿಂದ ಆತ 2 ಸಾವಿರ ರೂಪಾಯಿಯನ್ನು ಕೊಡಬೇಕು ಅದಕ್ಕೆ ಯಾವ ಪರಿಹಾರವೂ ಸಿಗುವುದಿಲ್ಲ ಆಮೇಲೆ ಉಳಿದಂತಹ ಹಣಕ್ಕೆ 84ರವರೆಗೆ ಕಂತಿನ ಪ್ರಕಾರ ಬಾಕಿಯನ್ನು ಕೊಡಬೇಕಾಗುತ್ತದೆ. ನವೆಂಬರ್ 84ರ ನಂತರ ಎಂದು ಹೇಳಿದ ಮೇಲೆ 2500 ರೂಪಾಯಿ ಕೊಡುವಂತಹ ಗೇಣಿ ರೈತರಿಗೆ ಅಷ್ಟು ಅನುಕೂಲವೇನೂ ಆಗುವುದಿಲ್ಲ. 2 ಸಾವಿರ ರೂಪಾಯಿ ಕೊಡಬೇಕು ಮತ್ತು 84 ರವರೆಗೆ ಕಂತನ್ನು ಕೊಡ ಬೇಕಾಗಿತ್ತು. ಇದರ ಪ್ರಕಾರ ಆತನಿಗೆ 250 ರೂಪಾಯಿ ಪರಿಹಾರ ಸಿಕ್ಕುತ್ತದೆ.

ಮೂಗಿಗೆ ತುಪ್ಪ ಹಚ್ಚಿದ ಹಾಗೆ ಆಗುತ್ತದೆ. ಆದ್ದರಿಂದ ಇಂತಹ ತಿದ್ದುಪಡಿ ಅಗತ್ಯವೆಂದು ಹೇಳಿದ್ದೆ ಈಗ ಆಗಿದೆ ಆ ಕಾರಣಕ್ಕಾಗಿ ಗೇಣಿ ರೈತ ಹಿಂದಕ್ಕೆ ಕೊಡುವಂಥಾದ್ದು ಆಗಬಹುದು ಆಗಬಹುದು ಅಥವಾ 84ರ ನಂತರ ಕೊಡುವುದು ಇರಬಹುದು ಇದೆಲ್ಲವೂ ಕೂಡ ಮುಕ್ತಾಯ .ಇದಷ್ಟನ್ನು ನೀವು ಮಾಡಲಿಲ್ಲ. ಮಾಡುವಾಗ ಇಂತಹ ಒಂದು ಸಣ್ಣ ತಪ್ಪಿನಿಂದಾಗಿ ಪೂರ್ಣವಾದಂತಹ ಪರಿಹಾರ ರೈತರಿಗೆ ಆ ಕಾಲದಲ್ಲ ಸಿಗಲಿಲ್ಲ. ಈಗ ಮಾನ್ಯ ಯಡಿಯೂರಪ್ಪನವರು ಹೇಳಿದರು. ಕೊಟ್ಟಂತಹ ಹಣವನ್ನು ವಾಪಸ್ಸು ಕೊಡಬೇಕು ಎಂದು. ತಾವು ಹೋರಾಟಗಾರರು ನಿಮ್ಮ ಬಗ್ಗೆ ಅಭಿಮಾನ, ಮೆಚ್ಚಿಗೆ ಇದೆ. ತಮ್ಮ ಹೋರಾಟ ಬಗ್ಗೆ ಅಭಿನಂದಿಸುತ್ತೇನೆ. ಆದರೆ ಸಹಕಾರಿ ಸಂಘದ ಸಾಲವನ್ನು ರದ್ದು ಮಾಡಬೇಕೆಂದು ಹಳ್ಳಿಯಿಂದ ಬೆಂಗಳೂರಿಗೆ ಜನರನ್ನು ಕರೆತಂದು ಮೆರವಣಿಗೆ ಮಾಡಿದಿರಿ, ನಾನು ಅಪ್ರಿಷಿಯೇಟ್ ಮಾಡುತ್ತೇನೆ. I appreciate that Zeal, that Committement and involvement in the movement. I really commend. and respect for that ಆದರೆ ಗೇಣಿ ರೈತನ್ನು ಕರೆದುಕೊಂಡು ಬಂದು ಏಕೆ ಹೋರಾಟ ಮಾಡಲಿಲ್ಲ. ಹಿಂದೆ ನಮ್ಮ ಊರಿನಲ್ಲೂ ಜಪ್ತಿ ಮಾಡುವುದಕ್ಕೆ ಒಂದೆರಡು ಗ್ರಾಮಕ್ಕೆ ಹೋದರು ಆಗ ನಾನೇ ವಸೂಲು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ ಅವರನ್ನು ಕಳಿಸಬೇಕಾಯಿತು. ಮಾನ್ಯ ಬಂಗಾರಪ್ಪನವರು 67 ರಲ್ಲಿ ಶಾಸಕರಾಗಿ ಇಲ್ಲಿಗೆ ಬಂದಿದ್ದರು. ಅವರ ತಾಲ್ಲೂಕಿನಲ್ಲಿ ಒಂದು ಸಾರಿ ಲೆವಿ ವಸೂಲು ಮಾಡುವುದಕ್ಕೆ ಬಂದಾಗ, ಎಸ್.ಪಿ. ಸಿಂಗ್‌ರವರು ಸಾಗರದಲ್ಲಿ ಇದ್ದರು ರಸ್ತೆಯಲ್ಲಿ ನನಗೂ ಅವರಿಗೂ ಮುಖಾ ಮುಖಿ ಚರ್ಚೆಯಾಗಿ ಆತ ಗಾಡಿ ಹಿಡಿಯಬೇಕು ಹಿಡಿಯುತ್ತೇನೆಂದು ಹೇಳುತ್ತಿದ್ದರು ನಾನು ಗಾಡಿ ಮುಟ್ಟುವುದಕ್ಕೆ ಬಿಡುವುದಿಲ್ಲವೆಂದು ಪಟ್ಟು ಹಿಡಿದೆ. Today he is the Secretary , We used to fight on the streets.

3.45 ಪಿ.ಎಂ

ಗಾಡಿಯನ್ನು ವಾಪಸ್ಸು ಕಳುಹಿಸಿದ್ದೇವೆ. ಅರೆಸ್ಟ್ ಆಗುತ್ತಿದ್ದವು. ಶಿಕಾರಿಪುರ ತಾಲ್ಲೂಕಿನಲ್ಲಿ ಒಂದೇ ಸಾರಿ ಇಡೀ ಗ್ರಾಮಕ್ಕೆ ರಿಸರ್ವ್‌ಪೋಲೀಸ್ ಸಮೇತ ವಸೂಲಿ ಮಾಡಲಿಕ್ಕೆ ಮನೆಗೆ ನುಗ್ಗಿದರು. ಅವರು ಬೆಂಗಳೂರಿನಲ್ಲಿದ್ದರು. ನಾನು ಹೋಗಿ ಪ್ರತಿಯೊಬ್ಬರನ್ನು ಕೂಡಿಕೊಂಡು ನಿಂತುಕೊಂಡು ಅದು ಹೇಗೆ ವಸೂಲಿ ಮಾಡುತ್ತೀರಿ, ನಮ್ಮ ಎದೆಗೆ ಗುಂಡು ಹೊಡೆದು ಜಪ್ತಿ ಮಾಡಿ ಎಂದು ಹೇಳಿದೆವು. ಪ್ರತಿಯೊಂದು ಮನೆಯ ಮುಂದೆ ನಿಂತುಕೊಂಡು ನಮ್ಮ ಮನೆಗಳನ್ನು ಜಪ್ತಿ ಮಾಡುವುದಾದರೆ ಮಾಡಿರಿಯೆಂದು ಎಲ್ಲರೂ ಸಾಲಾಗಿ ನಿಂತುಕೊಂಡೆವು. ಒಂದು ಸಾರಿ ಎರಡು ಸಾರಿ ಮೂರು ಸಾರಿ ಎಂದು ಹೇಳಿ 10-15ಜನರನ್ನು ಬ್ಯಾಚ್‌ಮಾಡಿಕೊಂಡು ದಸ್ತಗಿರಿ ಮಾಡಿಕೊಂಡು ತೆಗೆದುಕೊಂಡು ಹೋದರು. ಅವರ ಯಾರ ಮನೆಗೂ ನುಗ್ಗುವುದಕ್ಕೆ ಆಗಲಿಲ್ಲ. ಅವರು ಒಂದು ಮನೆಗೆ ಮಾತ್ರ ನುಗ್ಗಿ ಜಪ್ತಿ ಮಾಡಿದರು. ಬೇರೆ ಮನೆಗಳದ್ದು ಮಾಡಲು ಆಗಲಿಲ್ಲ. ಆಮೇಲೆ ರಿಸರ್ವ್ ಪೋಲೀಸ್‌ನವರ ಸಮೇತ ವಾಪಸ್ಸು ಬಂದರು. ಆಮೇಲೆ ಕೆಲವು ಕೇಸ್‌ಗಳು ನಡೆದವು. ಏಕೆಂದರೆ ತಾವು ಹೋರಾಟಕ್ಕೆ ಇಲ್ಲದ ಮೇಲೆ ತಾವು ಹೋರಾಟ ಮಾಡಬೇಕಾಗಿತ್ತು. ಈಗ ನಮ್ಮ ಸರ್ಕಾರ ಬಂತು, ನೀವು ಶಿಕಾರಿಪುರ ತಾಲ್ಲೂಕಿನಲ್ಲಿ ಸಾಲ ವಸೂಲಿಯಾಗುತ್ತಿದ್ದರೆ ಯಾರೂ ಸಾಲವನ್ನು ವಾಪಸ್ಸು ಕೊಡಬೇಡಿ. ಸಾಲ ವಸೂಲಿ ಮಾಡುವ ಸರ್ಕಾರಕ್ಕೆ ಧಿಕ್ಕಾರ ಎಂದು, ಅಧಿಕಾರಿಗಳು ವಾಪಸ್ಸು ಹೋಗಿ ಎಂದು ಹೇಳಿ, ನೀವು ಆ ಬಗ್ಗೆ ಪ್ರತಿಜ್ಞೆ ಮಾಡಿ ಹೋರಾಟ

ಮಾಡಿ ಜನರನ್ನು ಎತ್ತಿಕಟ್ಟಬೇಕಾಗುತ್ತಿತ್ತು ನೀವು ಜನರನ್ನು ಎತ್ತಿಕಟ್ಟಿದ್ದರೆ ಅದರ ಲಾಭ ನಿಮಗೂ ಸಿಗುತ್ತಿತ್ತು. ನಮಗೂ ಸಿಗುತಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಗೇಣಿದಾರರ ಪರವಾಗಿ ಹೋರಾಟ ಮಾಡಿದ್ದೇನೆಯೋ ಅಥವಾ ಇಲ್ಲವೋ ಎಂಬುದನ್ನು ನಿಮ್ಮ ಕಾಂಗ್ರೆಸ್ ಮಿತ್ರರನ್ನು ಕೇಳಿ. ನಾನು ತಹಶೀಲ್ದಾರ್ ಆಫೀಸಿನ ಹತ್ತಿರ ಗಲಾಟೆ ಮಾಡಿದ್ದೇನೆಯೋ ಅಥವಾ ಇಲ್ಲವೋ ಎಂಬುದನ್ನು ನಿಮ್ಮ ಕಾಂಗ್ರೆಸ್ ಮಿತ್ರರನ್ನು ಕೇಳಿ. ನನ್ನ ಕೇಳಬೇಡಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಯಡಿಯೂರಪ್ಪನವರ ಬಗ್ಗೆ ಮತ್ತು ಕಾಗೋಡು ತಿಮ್ಮಪ್ಪನವರ ಬಗ್ಗೆ ಸಾಕಷ್ಟು ಕೇಳಿದ್ದೇವೆ. ಈಗ ಮಾನ್ಯ ಸದಸ್ಯರು ವಿಷಯಕ್ಕೆ ಬರಬೇಕೆಂದು ವಿನಂತಿಸಿಕೊಳ್ಳುತ್ತೇನೆ

ಉಪಾಧ್ಯಕ್ಷರು : ತಾವು ತಿದ್ದುಪಡಿ ಬಗ್ಗೆ ಮಾತನಾಡಿ

ಶ್ರೀ ಕಾಗೋಡು ತಿಮ್ಮಪ್ಪ : ಇದರಿಂದ ಸಾಗರಕ್ಕೆ ಹೆಚ್ಚು ಲಾಭವಾಗುತ್ತದೆ, ಸೂರಬಕ್ಕೆ ಹೆಚ್ಚು ಲಾಭವಾಗುತ್ತದೆ, ತೀರ್ಥಹಳ್ಳಿಗೆ ಹೆಚ್ಚು ಲಾಭವಾಗುತ್ತದೆ, ಶಿಕಾರಿಪುರಕ್ಕೆ ಹೆಚ್ಚು ಲಾಭವಾಗುತ್ತದೆ ಕೋಲಾರಕ್ಕೆ ಹೆಚ್ಚು ಲಾಭವಾಗುತ್ತದೆ ಎನ್ನುವುದಿಲ್ಲ. ಗೇಣಿದಾರ ಎಂಬ ಒಬ್ಬ ಮನುಷ್ಯ ಬಹಳ ಕಾಲದಿಂದಲೂ ದೈಸ್ಯತ್ವದಲ್ಲಿರತಕ್ಕ ಒಂದು ಸಮಾಜದಲ್ಲಿ ದಾಸ್ಯದ ಸಂಕೋಲೆಗೆ ಸಿಕ್ಕಿರತಕ್ಕ ವ್ಯಕ್ತಿ, ಅವನನ್ನು ಈ ದಾಸ್ಯಸಂಕೋಲೆಯಿಂದ ಮುಕ್ತ ಮಾಡಬೇಕೆಂದು ಒಂದೇ ಒಂದು ಸಮಾಜವಾದದ ಗುರಿಯಾಗಿತ್ತು. ಅವನನ್ನು ಮುಕ್ತ ಮಾಡುವುದಕ್ಕೋಸ್ಕರ ಇದನ್ನು ತಂದಿದ್ದೇವೆ. ನಮ್ಮ ಎಂ.ಡಿ. ನಂಜುಂಡಸ್ವಾಮಿಯವರು ಹೇಳಿದರು, ಸಮಾಜವಾದ ಡಿಟಿಯರೇಂಟ್ ಆಗುತ್ತದೆ ಎಂದು, ಡಿಟಿಯರೇಟ್ ಅಲ್ಲ, ಈಗ ಸ್ವಲ್ಪ ಮುಂದೆ ಹೋಗುತ್ತಿದ್ದೇವೆ. ಸಮಾಜವಾದವನ್ನು ಒಂದೇ ಸಾರಿ ಒಂದೇ ಕಾಲಕ್ಕೆ ಎಲ್ಲರೂ ಸ್ವೀಕಾರ ಮಾಡುವುದಿಲ್ಲ. ಅದನ್ನು ಬಹಳ ಜನ ಒಪ್ಪುವುದಿಲ್ಲ. ಆದರಿಂದ ಸ್ವಲ್ಪ ಮುಂದೆ ಹೋಗಿದ್ದೇವೆ ಎನ್ನುವ ಮಾತನ್ನು ಅವರಿಗೆ ಹೇಳುತ್ತಾ ಅದನ್ನು ತಮಗೆ ನೆನಪು ಮಾಡಿಕೊಟ್ಟು ಈ ಮಸೂದೆಯನ್ನು ಸ್ವಾಗತ ಮಾಡುತ್ತೇನೆ. ಇದರಲ್ಲಿ ಒಂದೇ ಒಂದು ಮಾತನ್ನು ಮಾನ್ಯ ಕಂದಾಯ ಸಚಿವರಿಗೆ ಮನವರಿಕೆ ಮಾಡುವುದಕ್ಕೆ ನಾನು ಇಷ್ಟಪಡುತ್ತೇನೆ. ಏಕೆಂದರೆ ಗೇಣಿ ಎನ್ನುವ ಒಂದು ಪದಕ್ಕೆ ವ್ಯಾಖ್ಯಾನ ಮಾಡಿದ್ದಾರೆ. ಗೇಣಿ ಪದ್ಧತಿ ಇಲ್ಲ, ಹಿಂದೆ ಸೈನ್ಯಕ್ಕೆ ಸೇರಿದವರು ಆ ಕಾಲದಲ್ಲಿ ತಮ್ಮ ಭೂಮಿಯನ್ನು ಯಾರಿಗಾದರೂ ಗೇಣಿಗೆ ಕೊಟ್ಟಿದ್ದರೆ, ಅಂತಹವರ ಭೂಮಿ ಗೇಣಿದಾರರಿಗೆ ಸೇರುವುದಿಲ್ಲ ಅದು ಹಾಗೆಯೇ ಮುಂದುವರಿದುಕೊಂಡು ಹೋಗಬಹುದೆಂದು ಕಾನೂನಿನಲ್ಲಿ ಒಂದು ತಿದ್ದುಪಡಿಯನ್ನು ಮಾಡಿದ್ದಾರೆ. ಆದರೆ ಗೇಣಿಯೆಂದರೇನು ಎನ್ನುವುದನ್ನು ವ್ಯಾಖ್ಯಾನ ಮಾಡಿ ನಾವು ತೀರ್ಮಾನ ಮಾಡಿದ್ದೇವೆ. ಹಿಂದೆ ಮುಂಬಯಿ ಪ್ರದೇಶದಲ್ಲಿ ಒಂದು ಗೇಣಿ ಪದ್ಧತಿ ಇತ್ತು. ನಮ್ಮ ಕರ್ನಾಟಕದಲ್ಲಿ ಒಂದು ಪದ್ಧತಿ ಇತ್ತು. ಇದು ಸರಿಯಲ್ಲವೆಂದು ಇದರಿಂದ ಅನೇಕ ವ್ಯಾಜ್ಯಗಳು ಕೋರ್ಟ್ ವ್ಯವಹಾರಗಳು ನಡೆದು ನಾಲ್ಕನೇ ಒಂದು ಅಂಶ ನಿರ್ಧಾರ ಮಾಡುವುದು ಹೇಗೆ, ಐದನೇ ಒಂದು ಅಂಶ ನಿರ್ಧಾರ ಮಾಡುವುದು ಹೇಗೆ, ಇದೆಲ್ಲಾ ಆಗಿ ಮುಂದೆ ಇದೆಲ್ಲಾ ಬೇಡ, ಹಿಂದೆ ಮೊರಾರ್ಜಿದೇಸಾಯಿಯವರು ಬೊಂಬಾಯಿ ಪ್ರದೇಶದಲ್ಲಿ ಭೂಸುಧಾರಣೆ ಕಾನೂನಿನಲ್ಲಿ ಗೇಣಿ ಅಂದರೆ ಕಂದಾಯದ ಇಪ್ಪತ್ತರಷ್ಟು ಎಂದು ಇತ್ತು. ಅದೇ ರೀತಿ ಗೇಣಿ

ಅಂದರೆ ಕಂದಾಯದ 10ರಷ್ಟು ಎಂದು ನಾವು ನಿರ್ಧಾರ ಮಾಡಿ ಹೆಚ್ಚುಕಡಿಮೆ 1973ನೇ ಇಸವಿಯಿಂದ ಇವತ್ತಿನವರೆಗೆ ಅದು ಜಾರಿಯಲ್ಲಿದೆ. ಅದು ಸಿದ್ಧಾಂತ. ಅದರ ಮೊತ್ತ ಎಷ್ಟೆಂಬುದನ್ನು ನಾನು ಹೇಳುವುದಿಲ್ಲ. ಆದರೆ ನಮ್ಮ ಮಾನ್ಯ ಖರ್ಗೆಯವರಿಗೆ ಯಾರು ತಲೆಗೆ ಹಾಕಿದ್ದಾರೋ ಅದು ಎಲ್ಲಿಂದ ಅವರಿಗೆ ಒಳೆಯಿತೋ ಅವರ ತಲೆ ಒಳಗೆ ಹೇಗೆ ಹೋಯಿತೋ ಗೊತ್ತಿಲ್ಲ. ಯಥಾಪ್ರಕಾರವಾಗಿ ಹಳೆಯ ಗೇಣಿ ಕಡಿದಾಳ್ ಮಂಜಪ್ಪನವರು ತಂದ ಗೇಣಿ ಕಾನೂನು ಇತ್ತಲ್ಲ, ನಾಲ್ಕನೇ ಒಂದು ಭಾಗ ಐದನೇ ಒಂದು ಭಾಗದ ಅಂಶವನ್ನು ಅದನ್ನು ಇಲ್ಲಿ ತಂದು ಸೇರಿಸಿದ್ದಾರೆ. ಇದು ನನಗೆ ಅರ್ಥವಾಗುವುದಿಲ್ಲ. ಗೇಣಿ ಎಂಬುದು ತೀರ್ಮಾನ ಮಾಡಿರತಕ್ಕ ವಿಷಯ. ಸೈನ್ಯದಲ್ಲಿರುವವರಿಗೆ ಯಾವುದೇ ರೀತಿಯಲ್ಲಿ ಸಹಾಯ ಮಾಡಿ. ಅವರಿಗೆ ಬೇಕಾದರೆ ಪರಿಹಾರ ಕೊಡಿ ಅಥವಾ ಅವರಿಗೆ ಮನೆ ಕೊಡಿ, ಯಾವುದಾದರೂ ಕೊಡಿ. ಗೇಣಿ ವಿಚಾರದಲ್ಲಿ ಸ್ಪಷ್ಟವಾಗಿ ವ್ಯಾಖ್ಯಾನ ಮಾಡಿ. ಈಗಾಗಲೇ ನಿರ್ಧಾರವಾಗಿರತಕ್ಕ ವಿಚಾರದಲ್ಲಿ ಮತ್ತೆ ಭತ್ತ ಕೊಡಿ, ರಾಗಿ ಕೊಡಿ, ಗೋಧಿ ಕೊಡಿಯೆಂದು ಹಳೆಯ ಕಾಲಕ್ಕೇ ಹೋದರೆ, 1952ನೇ ಇಸವಿಯ ಕಡಿದಾಳ್ ಮಂಜಪ್ಪನವರ ಹಳೆಯ ಕಾಲದ ಗೇಣಿಗೆ ಹೋಗಬೇಕಾಗುತ್ತದೆ. ಇದನ್ನು ನಿಮಗೆ ಯಾರು ಹೇಳಿಕೊಟ್ಟರು ಎಂದು ನನಗೆ ಅರ್ಥವಾಗುತ್ತಿಲ್ಲ. ನಿಮ್ಮ ಮನೆಯಲ್ಲಿರುವ ಐದು ಸೇರು ರಾಗಿ ಬೇರೆಯವರಿಗೆ ಕೊಡಿಯೆಂದರೆ ನಿಮಗೆ ಹೊಟ್ಟೆ ಹುರಿಯುವುದಿಲ್ಲವೇ? ಇದು ನಿಮಗೆ ಗೊತ್ತಿಲ್ಲವೆ? ಅವನ ಬೆವರಿನ ಪ್ರಮಾಣ ಎಷ್ಟಿರುತ್ತದೆ? ಗೇಣಿಯಲ್ಲಿ ದುಡಿಯುವರು ಗೇಣಿ ಏತಕ್ಕೆ ಕೊಡಬೇಕು. ಕಂದಾಯದ ಹತ್ತರಷ್ಟು ಕೊಡಬೇಕೆಂದು ಈಗಲಾದರೂ ತಿದ್ದುಪಡಿ ತಂದು, ಈ ಗೇಣಿ ವ್ಯಾಖ್ಯಾನಕ್ಕೆ ಹೊಸ ವ್ಯಾಖ್ಯಾನ ಕೊಡುವುದಕ್ಕೆ ಹೋಗಬೇಡಿ; ಹಿಂದೆ ಕಂದಾಯದ ಹತ್ತರಷ್ಟು ಏನಿತ್ತು ಮುಂದುವರಿಸಿಕೊಂಡು ಹೋಗಬೇಕೆಂದು ನಾನು ಹೇಳುತ್ತೇನೆ. ಇನ್ನೊಂದು ವಿಚಾರವನ್ನು ನಾನು ಅವರಿಗೆ ಹೇಳುತ್ತೇನೆ. ಸೆಕ್ಷನ್ 79 ಕ್ಕೆ ಒಂದು ತಿದ್ದುಪಡಿ ತಂದಿದ್ದಾರೆ. ಈಗ ಏನಾಗಿದೆ ಎಂದರೆ ನಾನು ಕರ್ನಾಟಕ ಗೃಹಮಂಡಳಿಯ ಅಧ್ಯಕ್ಷ ಕೂಡ ಹೌದು. ಇವತ್ತು ಅನೇಕ ಕಡೆ ಮನೆಗಳನ್ನು ಕಟ್ಟಬೇಕೆಂದರೆ ಭೂಮಿಯನ್ನು ಕೊಳ್ಳಬೇಕಾಗಿದೆ. ಪುರಸಭೆಯನ್ನು ಇನ್ನಿತರ ಸಂಘಸಂಸ್ಥೆಗಳು ಕೊಳ್ಳಬೇಕಾಗುತ್ತದೆ. ಆದರೆ ಇವತ್ತು ಕೃಷಿ ಭೂಮಿಯನ್ನು ಕೊಳ್ಳುವಹಾಗಿಲ್ಲ. ಅದಕ್ಕೆ ಸೆಕ್ಷನ್ 81 ನನಗೆ ಅಡ್ಡಿ ಬರುತ್ತದೆ. ಆದ್ದರಿಂದ ಸರ್ಕಾರ ಕೊಳ್ಳಬೇಕಾದರೆ, ಕೇಂದ್ರಸರ್ಕಾರ ಕೊಳ್ಳಬೇಕಾದರೆ ಅಥವಾ ರಾಜ್ಯಸರ್ಕಾರದ ಅಂಗಸಂಸ್ಥೆಗಳು ಕೊಳ್ಳುವಾಗ ಏನು ಕೃಷಿ ಭೂಮಿಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ, ಅದೇರೀತಿ ಯಾರಾದರೂ ಬೇರೆ ರೂಪದಲ್ಲಿ ಕಾರ್ಪೊರೇಷನ್ ಆಗಬಹುದು, ಸಹಕಾರಸಂಘ, ಬೋರ್ಡ್ ಆಗಬಹುದು, ಯಾರಾದರೂ ಕೃಷಿ ಭೂಮಿಯನ್ನು ಖರೀದಿ ಮಾಡತಕ್ಕಂಥ ಸಂದರ್ಭದಲ್ಲಿ ಅದಕ್ಕೆ ಅನುಕೂಲ ಆಗುವ ಹಾಗೆ ತಿದ್ದುಪಡಿ ಮಾಡಬೇಕು. ಏಕೆಂದರೆ ನಮ್ಮ ಶಾಸಕರು ಇಷ್ಟು ಜನ ಇದ್ದಾರೆ. ಇವತ್ತು ತಮ್ಮ ತಮ್ಮ ಊರಿನಲ್ಲಿ ಮನೆಗಳನ್ನು ಕಟ್ಟಿಕೊಡಿ ಎಂದು ಎಲ್ಲರೂ ಹೇಳುತ್ತಾರೆ. ಆದರೆ ಭೂಮಿ ಸಿಗುತ್ತಿಲ್ಲ. ಈಗ ಹಳೇ ಲ್ಯಾಂಡ್ ಅಕ್ವಿಸಿಶನ್ ಆಕ್ಟ್ ಪ್ರಕಾರ ಅಕ್ವಿಸಿಶನ್ ಮಾಡಬೇಕೆಂದು ಹೇಳಿದರೆ, ನೋಟಿಫಿಕೇಶನ್ ಹೊರಡಿಸಬೇಕಾದರೆ ನಮಗೆ ಆರು ತಿಂಗಳು ಆಗುತ್ತದೆ. ಒಂದೊಂದು ಸಾರಿ ಒಂದು ವರ್ಷ ಕೂಡ ಆಗುತ್ತದೆ. ಕೇವಲ ನೋಟಿಫಿಕೇಷನ್ ಆಗಿದ್ದನ್ನು ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಗೆಜೆಟ್‌ನಲ್ಲಿ ಪಬ್ಲಿಷ್ ಮಾಡಬೇಕಾದರೆ ಒಂದು ವರ್ಷ ಹಿಡಿಯುತ್ತದೆ.

ಇವತ್ತು ಜನರ ಬೇಡಿಕೆಯನ್ನು ಪರಿಗಣಿಸಿ ಮನೆಗಳನ್ನು ಕಟ್ಟಿಕೊಡಬೇಕಾಗುತ್ತದೆ. ಮತ್ತು ಏನಾದರೂ ಕಾರ್ಯಚಟುವಟಿಕೆಗಳನ್ನು ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಕೃಷಿ ಭೂಮಿಯನ್ನು ನೇರವಾಗಿ ನಾವು ಖರೀದಿ ಮಾಡಿದರೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಇವತ್ತು 79ಕ್ಕೆ ಏನು ತಿದ್ದುಪಡಿಯನ್ನು ತಂದಿದ್ದೀರಿ, ಇದರ ಅರ್ಥವನ್ನು ಅಥವಾ ಇದರ ವ್ಯಾಪ್ತಿಯನ್ನು ಬೇರೆ ಈ ರೀತಿ ಸ್ಟಾಚ್ಯುಟರಿಬಾಡಿಗಳಾಗಲೀ, ಅಥವಾ ಸ್ಥಳೀಯ ಸಂಸ್ಥೆಗಳಾಗಲೀ ಇಂತಹ ಸಂಸ್ಥೆಗಳು ಕೂಡ ಅವರ ಅಭಿವೃದ್ಧಿ ಕಾರ್ಯಕ್ಕೋಸ್ಕರವಾಗಿ ಭೂಮಿಯನ್ನು ಪಡೆಯಬೇಕೆಂದು ಅಪೇಕ್ಷೆಪಟ್ಟರೆ ಈ ಭೂಸುಧಾರಣೆ ಕಾಯಿದೆ ಅಡ್ಡ ಬರದ ರೀತಿಯಲ್ಲಿ ತಾವು 81 ಸೆಕ್ಷನ್‌ಗೆ ತಿದ್ದುಪಡಿಯನ್ನು ತಂದು ಭೂಮಿ ಖರೀದಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಮಾತ್ರ ಹೇಳಿ ಮತ್ತೊಮ್ಮೆ ಮಾನ್ಯ ಕಂದಾಯ ಸಚಿವರಿಗೆ ಸುಧೀರ್ಘವಾದಂಥ ಕೃತಜ್ಞತೆಯನ್ನು ಸಲ್ಲಿಸಿ ಈ ಮಸೂದೆಯನ್ನು ಎಲ್ಲರೂ ಸರ್ವಾನುಮತದಿಂದ ಅಂಗೀಕರಿಸಬೇಕೆಂದು ಹೇಳುತ್ತೇನೆ.

+ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೆ, ಬಹಳ ,ದಿವಸಗಳಿಂದ ಈ ಮಸೂದೆಯನ್ನು ಜನರು ನಿರೀಕ್ಷೆ ಮಾಡಿದ್ದರು. ಬಹಳ ತಡವಾದರೂ ಅಡ್ಡಿಯಿಲ್ಲ, ಮಾನ್ಯ ಕಂದಾಯ ಸಚಿವರು ಈ ಮಸೂದೆಯನ್ನು ತಂದಿದ್ದಕ್ಕೆ ಮೊದಲು ನಾನು ಅವರನ್ನು ಅಭಿನಂದಿಸುತ್ತೇನೆ. ಎರಡನೆಯದಾಗಿ ಇವತ್ತಿನ ದಿವಸ ಈ 79ನೇ ಸೆಕ್ಷನ್ ಅನ್ನು ತೆಗೆದುಹಾಕಬೇಕೆಂದು ಹೇಳುತ್ತೇನೆ. ಒಂದನೇಯದು, ಈಗ 12 ಸಾವಿರಕ್ಕಿಂತಲೂ ಹೆಚ್ಚಿಗೆ ಎಲ್ಲಮೂಲಗಳನ್ನು ಸೇರಿಸಿ ಉತ್ಪನ್ನ ಯಾರಿಗೆ ಇದೆ, ಅವರಿಗೆ ಬೇರೆ ಜಮೀನು ತೆಗೆದುಕೊಳ್ಳುವುದಕ್ಕೆ ಬರುತ್ತಿರಲಿಲ್ಲ. ಆದರೆ ಇವತ್ತು ಇದನ್ನು ತಾವು 50 ಸಾವಿರಕ್ಕೆ ಏರಿಸಿದ್ದೀರಿ. ಇಷ್ಟು ಏರಿಸಿದ್ದರೂ ಸಹಿತ ಜನರಿಗೆ ಇದರಿಂದ ಬಹಳ ತ್ರಾಸು ಆಗುತ್ತದೆ. ಇವತ್ತು ತಮಗೆ ಒಂದು ಉದಾಹರಣೆಯನ್ನು ಕೊಡಬೇಕೆಂದರೆ, ನಮ್ಮ ಅಮ್ಮನ ಹೆಸರಿನಲ್ಲಿ ಒಂದು ಹೊಲ ಇದ್ದರೂ ಸಹಿತ, ಆಕೆಗೆ ಮತ್ಯಾರೂ ವಾರಸುದಾರರು ಇದ್ದರೂ ಕೂಡ ಆಕೆ ಸಾಯುವ ಕಾಲಕ್ಕೆ ಒಂದು ಮೃತ್ಯುಪತ್ರ ಮಾಡಿ ಸತ್ತರೂ ಸಹಿತ, ಮೊಮ್ಮೊಗನ ಹೆಸರಿನಲ್ಲಿ ಆ ಜಮಿನು ಇದ್ದರೂ ಅದು ಮೃತ್ಯುಪತ್ರದಿಂದ ರೈಡ್ ಆಗುತ್ತದೆ. ಅಷ್ಟೇ ಅಲ್ಲ ಆಕೆ ಮಾರಬೇಕೆಂದರೂ ಸಹಿತ ಮತ್ತೊಬ್ಬರಿಗೆ ಮಾರಲಿಕ್ಕೆ ಬರುತ್ತಿಲ್ಲ. ತಮಗೆ ಒಂದು ಮಾತನ್ನು ಹೇಳುತ್ತೇನೆ.

However acquisition of land otherwise than by way of inheritence by way of contravention of this section shall be null and void.

ಆದಕಾರಣ ಇವತ್ತಿನದಿವಸ ಇದು ಎಷ್ಟು ತ್ರಾಸಾವಾಗುತ್ತದೆ ಎಂದರೆ ಮತ್ತೊಬ್ಬರಿಗೆ ಕೊಡಲಿಕ್ಕೆ ಬರುವುದಿಲ್ಲ. ಮತ್ತು ತೆಗೆದುಕೊಳ್ಳಲಿಕ್ಕೆ ಸಹಿತ ಬರುವುದಿಲ್ಲ. ಇವತ್ತು ನೀವೇ ವಿಚಾರ ಮಾಡಿ. ನಿಮ್ಮ ಹೊಲ ಜೇವರ್ಗಿಯಲ್ಲಿ ಇದ್ದರೂ ಸಹಿತ, ಅಲ್ಲಿಂದ ಅದು ಇನ್‌ಕನ್ವಿನಿಯಂಟ್ ಎಂದು ಇಲ್ಲಿ ಬೆಂಗಳೂರಿನಲ್ಲಿ ಅಥವಾ ಗುಲ್ಬರ್ಗಾದಲ್ಲಿ ಬೇರೆ ಜಮೀನು ತೆಗೆದುಕೊಳ್ಳಬೇಕು ಎಂದರೆ ಇವತ್ತು ಈ ಕಾಯಿದೆ ಅಡ್ಡ ಬರುತ್ತದೆ. ಹಾಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ನೀವು ಅಗ್ರಿಕಲ್ಚರಿಸ್ಟ್ ಇದ್ದೀರಿ, ಬೇರೆ ಕಡೆ ತೆಗೆದುಕೊಳ್ಳುತ್ತೇನೆ ಎಂದು ಹೇಳಬಹುದು. ಆದರೆ ಈಗಿರುವ ಸೆಕ್ಷನ್ ಕೆಳಗೆ ಹೊಲ ಮಾರಿದ ಎಂದರೆ ಮುಗಿಯಿತು.

ಮತ್ತೆ ಅಕ್ವಿಸಿಶನ್ ಮಾಡಿಕೊಳ್ಳಬೇಕಾದರೆ, ಸೆಕ್ಷನ್ 80ರ ಕೆಳಗೆ ಮತ್ತೆ ಅಸಿಸ್ಟೆಂಟ್ ಕಮೀಷನರ್ ಕಡೆಯಿಂದ ಅನುಮತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ.

ಆದಕಾರಣ, ಇಂತಹ ಒಂದು ಅಡಚಣೆ ನಿಜವಾಗಿಯೂ ಈಗಾಗಲೇ ಸೆಕ್ಷನ್ 80ರಲ್ಲಿದೆ. ಒಬ್ಬ ಹೋಲ್ಡಿಂಗ್ 54ಎಕರೆಗಿಂತಲೂ ಹೆಚ್ಚು ಇರುವುದಕ್ಕೆ ಬಿಡುವುದಿಲ್ಲ. 54ಎಕರೆಗಿಂತಲೂ ಹೆಚ್ಚಿಗೆ ಯಾವುದೇ ಒಬ್ಬ ಮನುಷ್ಯ ಉಪಯೋಗ ಮಾಡುವುದಕ್ಕೆ ಬರದೇ ಇದ್ದಾಗ, ಈ ಸೆಕ್ಷನ್ ಇಟ್ಟುಕೊಂಡು ಏನು ಮಾಡುವುದು? ಇವತ್ತಿನದಿವಸ, ಸನ್ಮಾನ್ಯ ಕೆ. ಹೆಚ್. ಪಾಟೀಲರು, ಮಾನ್ಯ ಕಂದಾಯ ಮಂತ್ರಿಗಳಾದ ನಂತರ, ಒಂದು ಸ್ಟೇಟ್‌ಮೆಂಟ್ ಮಾಡಿದರು. ಏನೆಂದರೆ, ಸೆಕ್ಷನ್ 79ರ ಕೆಳಗೆ, ಯಾವ ಜಮೀನು ಖರೀದಿಯಾಗಿವೆ, ಅವುಗಳನ್ನು ಮೊದಲಿನಿಂದಲೂ ಎನ್‌ಕ್ವೈರಿ ಮಾಡಿಸುತ್ತೇವೆಂದು ಒಂದು ಪ್ರೆಸ್ ಸ್ಟೇಟ್‌ಮೆಂಟ್ ಬಂತು. ಈ ಪ್ರೆಸ್ ಸ್ಟೇಟ್‌ಮೆಂಟ್ ಬಂದನಂತರ ಬೆಳಗಾಂ ಜಿಲ್ಲೆಯೊಳಗೆ, 1974ನೇ ಇಸವಿಯಲ್ಲಿ ಯಾವ ಯಾವ ಜಮೀನು ಖರೀದಿಯಾಗಿವೆ, ಅವರೆಲ್ಲರಿಗೂ ನೋಟೀಸ್ ಕೊಡುವುದಕ್ಕೆ ಹತ್ತಿದರು. ತಲಾಟಿಯವರಿಗೆ, ಸರ್ಕಲ್ ಆಫೀಸರಿಗೆ ಮತ್ತು ತಹಶೀಲ್ದಾರರಿಗೆ ಇದು ಒಂದು ವ್ಯವಹಾರವಾಯಿತು. ಎಲ್ಲರಿಗೂ ನೋಟೀಸ್ ಕೊಟ್ಟರು. ಯಾರು ಬಂದರೂ, ಅಗ್ರಿಕಲ್ಚರಿಸ್ಟ್ ಯಾರಿದ್ದಾರೆ, ಅವರ ಕಡೆಯಿಂದ ಸ್ಟೇಟ್‌ಮೆಂಟ್ ತೆಗೆದುಕೊಳ್ಳುತ್ತಾರೆ. ವಾರ್ಷಿಕ ಉತ್ಪತ್ತಿ 12 ಸಾವಿರಕ್ಕಿಂತ ಕಡಿಮೆ ಇರುವ ರೀತಿಯಲ್ಲಿ ಸರ್ಟಿಫೈಮಾಡಿ ಮತ ಅಪ್ಲಿಕೇಷನ್ ಹಾಕುವ ರೀತಿಯಲ್ಲಿ ಮಾಡಿ, ತಹಶೀಲ್ದಾರ್ ಆಫೀಸಿಫೈಲ್ ಮಾಡಿಕೊಂಡರು. ಯಾರೋ ಒಬ್ಬ ಗುಮಾಸ್ತ ತನ್ನ ಹೆಂಡತಿ ಹೆಸರಿನಲ್ಲಿ ಅಥವಾ ಒಬ್ಬ ಸ್ಕೂಲ್ ಮಾಸ್ತರ್, ತನ್ನ ಹೆಂಡತಿ ಹೆಸರಿನಲ್ಲಿ ಅಥವಾ ಯಾರು ಅಗ್ರಿಕಲ್ಚರ್ ಇನ್‌ಕಮ್‌ಟ್ಯಾಕ್ಸ್ ಕೊಡುತ್ತಾರೆ, ಇಂತಹ ಬಕ್ರಾಗಳು ಸಿಕ್ಕಿ, ಅವನು ಅಸಿಸ್ಟೆಂಟ್ ಕಮೀಷನರ್ ಕಂಡು, ಅವರು ಲಾಯರನ್ನು ಇಟ್ಟು, ಇವತ್ತಿನದಿವಸ ಆ ರಿಟ್ ಬಗ್ಗೆ ಅರ್ಜಿಗಳು ಹೈಕೋರ್ಟ್ ಮುಂದೆ ಪೆಂಡಿಂಗ್ ಇದ್ದು, ದಾಖಲೆ ಮಾಡುವಂಥಹ ಉದಾಹರಣೆಗಳು ಬಹಳ ಇವೆ. ಆದಕಾರಣ, ನಿಜವಾಗಿಯೂ,79(ಬಿ)ನಲ್ಲಿ ಏನೇನು ಕಾಂಟ್ರಿಬ್ಯೂಷನ್ ಆಗಿವೆ, ಇದನ್ನು ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡುವುದಕ್ಕೆ ಬರುತ್ತದೆಯೋ, ಇಲ್ಲವೊ ಎಂದು ತಾವು ಕೇಳಬಹುದು. ತಾವು ಹೇಳಬಹುದು, ಇವತ್ತಿನದಿವಸ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡುವುದಕ್ಕೆ ಬರುವುದಿಲ್ಲ, ಇನ್ನು ಮುಂದೆ, ಫ್ಯೂಚರ್ ಕೊಡುತ್ತೇವೆಂದು ಹೇಳುತ್ತೀರಿ. ಕನ್‌ಸಾಲಿಡೇಟೆಡ್ ಸ್ಕೀಮ್ ಪ್ರಕಾರ, ಯಾವ ಪ್ರಾಗ್ಮೆಂಟೇಷನ್ ಪ್ರೋಸೀಡ್ ಆದದ್ದು ಇದನ್ನು ತಮ್ಮ ತಮ್ಮ ಕಾಲಕ್ಕೆ ತಾವು ಮಂತ್ರಿಗಳಿದ್ದಾಗಲೇ ರೆಗ್ಯುಲರೈಸ್ ಮಾಡಿದ್ದೀರಿ. ಅದೇ ಪ್ರಕಾರ, ಇದನ್ನೂ ಮಾಡುವುದಕ್ಕೆ ಬರುತ್ತದೆಯೋ ಇಲ್ಲವೋ ಎಂಬುದನ್ನು ನೋಡಬೇಕು. ತಾವೇ ಈ ಹಿಂದೆ ರೆವಿನ್ಯೂ ಮಿನಿಸ್ಟರ್ ಇದ್ದಾಗ, ತಾವು ಮೂವ್ ಮಾಡಿದ ಪ್ರಾಗ್ಮೆಂಟೇಷನ್ ಆಕ್ಟ್ ಪ್ರಕಾರ, ಏನು ಕಾಂಟ್ರವನ್‌ಷನ್ ಆಗಿತ್ತು, ಅವರಿಗೆ ಪೆನಾಲ್ಟಿ ಹಾಕಿದ್ದೀರಿ, ಅವುಗಳನ್ನು ರೆಗ್ಯುಲರೈಸ್ ಮಾಡಿದ್ದೀರಿ. ಅದೇ ಪ್ರಕಾರ, ಇವತ್ತಿನದಿವಸ, ಈ ಜಮೀನು ಕಾಂಟ್ರವೆನ್‌ಷನ್ ಯಾರ ಹೆಸರಿನಲ್ಲಿ,79(ಬಿ)ಕೆಳಗೆ ಆಗಿವೆ, ಇವುಗಳನ್ನು ರೆಗ್ಯುಲರೈಸ್ ಮಾಡಬೇಕು. ಇದೇನು ಬಹಳ ಮಂದಿ ಆಗಿಲ್ಲ. ಯಾರೋ ಒಬ್ಬರೋ ಇಬ್ಬರೋ ನೌಕರರದ್ದು ಆಗಿದೆ, ಬೇರೆಯವರದ್ದು ಆಗಿಲ್ಲ. ನಿಜವಾಗಿಯೂ ಒಬ್ಬ ಹೊಲ ತೆಗೆದುಕೊಳ್ಳಬೇಕಾದರೆ, ಯಾರೂ ದಂಗೆ ತೆಗೆದುಕೊಳ್ಳುವುದಿಲ್ಲ. ಈ ಹೊಲಕ್ಕೆ ಇವತ್ತಿನದಿವಸ ನೌಕರದಾರರು ಸಿಕ್ಕುವುದಿಲ್ಲ. ಇಂತಹ ಟೈಮ್ಸ್‌ನಲ್ಲಿ He must be an agriculturist ಎಂದು ಸೆಕ್ಷನ್

80ರಲ್ಲಿದೆ. ಆದರೆ, ಅಗ್ರಿಕಲ್ಚರಿಸ್ಟ್ ಇದ್ದಾಗ ಮತ್ತೊಂದು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಅಗ್ರಿಕಲ್ಚರಿಸ್ಟ್ ಎಂದು ಪರ್ಮಿಷನ್ ಕೊಡುವ ಅಧಿಕಾರ ಅಸಿಸ್ಟೆಂಟ್ ಕಮೀಷನರಿಗೆ ಇದೆ. ಇವತ್ತು ಒಬ್ಬ ಅಸಿಸ್ಟೆಂಟ್ ಕಮೀಷನರ್ 4-5ತಾಲ್ಲೂಕು ನೋಡಿಕೊಳ್ಳಬೇಕಾಗಿದೆ. ಅವನು, ಇವರಿಂದ ಪರ್ಮಿಷನ್ ತರಬೇಕಾದರೆ, ನಿಜವಾಗಿಯೂ ರೈತರಿಗೆ ಬಹಳ ತ್ರಾಸ್ ಆಗುತ್ತಿದೆ. ಆದ್ದರಿಂದ ಅಸಿಸ್ಟೆಂಟ್ ಕಮಿಷನರ್ ಪರ್ಮಿಷನ್ ಕೊಡುವಂತಾದ್ದನ್ನು ತಪ್ಪಿಸಿ, ಇದನ್ನು ತಹಶೀಲ್ದಾರರಿಗೆ ಕೊಡಬೇಕು. ತಹಶೀಲ್ದಾರರಿಗೆ, ಇವನು ನಿಜವಾಗಿಯೂ ಅಗ್ರಿಕಲ್ಚರಿಸ್ಟ್ ಇದ್ದಾನೆಯೇ, ಇಲ್ಲವೇ ಎಂದು ಗೊತ್ತಾಗುತ್ತದೆ. ಸೆಕ್ಷನ್ 80ರ ಕೆಳಗೆ "Provided that the Assistant Commissioner having jurisdiction over the area of any officer not below the rank of Assistant Commissioner authorised by the State Government in this behalf in respect of an area grant permission for such sale"

ಆದಕಾರಣ, ಅಸಿಸ್ಟೆಂಟ್ ಕಮೀಷನರ್ ಕಡೆಯಿಂದ ಪರ್ಮಿಷನ್ ತೆಗೆದುಕೊಳ್ಳುವುದು ಬಹಳ ತ್ರಾಸವಾಗುತ್ತಿದೆ. ದಯಮಾಡಿ, ಇದನ್ನು ತಹಶೀಲ್ದಾರರಿಗೆ ಕೊಡುವಂತೆ ಮಾಡಬೇಕು. ಮತ್ತೆ 12 ಸಾವಿರದಿಂದ 50 ಸಾವಿರದವರೆಗೆ ಮಾಡಿದ್ದೀರಿ, ಇದನ್ನು ತೆಗೆಯಬೇಕು. ಇದನ್ನು ತೆಗೆಯುವುದರಿಂದ, ತಮಗೆ ನಿಜವಾಗಿಯೂ, ಈ ಅಮೆಂಡ್‌ಮೆಂಟ್ ತರುವುದರಿಂದ ತಮಗೆ ಮತ್ತು ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಆದಕಾರಣ, ಇನ್ನೂ ಹೆಚ್ಚಿನ ಹೆಸರು ಪಡೆಯಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಎರಡನೆಯದು, 1-4-1974ರ ಕೆಳಗೆ ಆವತ್ತಿನದಿವಸ, all the lands have been vested with the Government.

ನಿಮ್ಮ ಕಡೆ ಓಲ್ಡ್ ಮೈಸೂರಿನಲ್ಲಿ ಕಡವತ್ತರ್ ಎನ್ನುವದು ಇಲ್ಲ. ನಮ್ಮ ಬಾಂಬೆ ಕರ್ನಾಟಕದಲ್ಲಿ ಕಡವತ್ತರ್ ಎನ್ನುವುದು ಇದೆ. ಆದರೆ, ರೆಕಾರ್ಡ್‌ನಲ್ಲಿ ಅಜ್ಜನ ಹೆಸರು, ಮೊಮ್ಮಗನ ಹೆಸರಿನಲ್ಲಿ ಮಾರ್ಟ್‌ಗೇಜ್ ಆದ ಹೆಸರು ಇದ್ದರೆ 128(2) ಕೆಳಗೆ ನೋಟೀಸ್ ಕೊಡದೇ, ಎಲ್ಲಾ, "lands have been converted into Government." ಎಂದು ಬರೆದಿದ್ದಾರೆ. ಇವತ್ತಿನ ದಿವಸ ಬೆಳಗಾಂ ಜಿಲ್ಲೆಯಲ್ಲಿ 30 ಪರ್ಸೆಂಟ್ ಗವರ್ನಮೆಂಟ್ ಆಫ್ ಕರ್ನಾಟಕ ಎಂಬತಕ್ಕಂಥ ಬೋಗಸ್ ಲ್ಯಾಂಡ್ ಇದೆ. ಆದರೆ, ನೀವು ಕೇಳಬಹುದು. ತಾವು ಕೇಳಿದ ತಕ್ಷಣ, ಕಬ್ಜ ಎಂದು ನಮ್ಮದು ಹೆಸರು ಇದೆ. ತಾವು ಟೆನೆನ್ಸಿಗೆ ಅಪ್ಲಿಕೇಷನ್ ಕೊಟ್ಟಿಲ್ಲ, ಡಿ.ಸಿ. ಕೇಳಿದ ಕೂಡಲೇ, ಒಳಗೆ ಕೂಡಿ, ಗವರ್ನಮೆಂಟ್ ಆಫ್ ಕರ್ನಾಟಕ ಎನ್ನುವುದನ್ನು ತೆಗೆಯುವುದಕ್ಕೆ ನಮಗೆ ಸಾಧ್ಯವಿಲ್ಲವೆಂದು ಹೇಳುತ್ತೀರಿ. ಆದಕಾರಣ, ಆ ಕಾಲಕ್ಕೆ 128(2) ಕೆಳಗೆ ನೋಟೀಸ್ ಕೊಟ್ಟಿದ್ದರೆ, ಇದು ಉದ್ಭವಿಸುತ್ತಾ ಇರಲಿಲ್ಲ. ಒನ್ ಫೈನ್ ಮಾರ್ನಿಂಗ್, ಒಂದು ಡೈರಿ ಮಾಡುವ ರೀತಿಯಲ್ಲಿ ಕರ್ನಾಟಕ ಸರ್ಕಾರ ಎಂದು ಎಂಟ್ರಿ ಮಾಡಿದ್ದಾರೆ ಕರ್ನಾಟಕ ಸರ್ಕಾರ ಎಂದು ಇನ್‌ಸೆಂಟ್ರಿ ಮಾಡಿದಮೇಲೆ, ಕಬ್ಜ ಇದ್ದವರು ಮಾಲೀಕರಾಗಿದ್ದಾರೆ. ಈ ಕಾಲಕ್ಕೆ, ಈ ಬೋಗಸ್ ಲ್ಯಾಂಡ್ ಏನಿವೆ, ಅವನ್ನು ಸಹಿತ ಕಡಿಮೆ ಮಾಡುವಂತಹ ಒಂದು ಕ್ರಮ ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಮೇಲೆ ಇವತ್ತಿನದಿವಸ ತಂದೆ ಹೆಸರಿನಲ್ಲಿ ಹೊಲ ಇತ್ತು ಎಂದರೆ ಹಿಂದೂ ಲಾ ಪ್ರಕಾರ Son is also an agriculturist; ಆದರೆ ಈ ನಿಮ್ಮ ಆಕ್ಟ್ ಪ್ರಕಾರ the son will not become an agriculturist ಅವನು ನೌಕರಿ ಮಾಡಬಹುದು ಬಿಡಿರಿ. ಆದರೆ ಹಿಂದೂ ಲಾ ಪ್ರಕಾರ ಘರಾಣೆ ಇದ್ದುದು

father, grand-father or grandson-it is deemed to have been agricultural family. But the Assistant Commissioner does not see that it is agricultural family. ಅವರಿಗೆ ಇದು ತಿಳಿಯುವುದಿಲ್ಲ.

ಆದರ ಸಲುವಾಗಿ ಇದು ಏನೇ ಇದ್ದರೂ ಸಹಿತ ಫ್ಯಾಮಿಲಿ ಇನ್‌ಕಮ್ 12 ಸಾವಿರ ಹಿಡಿಯಬೇಕೆಂದು ಹೇಳುತ್ತೀರಿ. ಎಲ್ಲಾ ಫ್ಯಾಮಿಲಿ ಇನ್‌ಕಮ್ ಎಂದರೆ, ಮೂರು ನಾಲ್ಕು ಮಂದಿಯ ಇನ್‌ಕಮ್ ಹಿಡಿದರೆ ಬಹಳ ಅನ್ಯಾಯವಾಗುತ್ತದೆ. ಆದಕಾರಣ ಹೊಲ ತೆಗೆದುಕೊಳ್ಳುವುದಕ್ಕೂ ಸಾಧ್ಯ ಇಲ್ಲ, ಹೊಲ ಕೊಡುವುದಕ್ಕೂ ಸಾಧ್ಯ ಇಲ್ಲ. ಆದಕಾರಣ ಈಗ ಏನು ಮಸೂದೆ ತಂದಿದ್ದೀರಿ ಅದನ್ನು ನಾನು ಸ್ವಾಗತಿಸುತ್ತೇನೆ. ಹೈಕೋರ್ಟಿಗೆ ಅಪೀಲ್ ಹೋಗಲು 90 ದಿವಸ ಇದ್ದುದನ್ನು 120 ಡೇಸ್ ಎಂದು ಮಾಡಿರುತ್ತೀರಿ. ನಿಜವಾಗಿಯೂ ಇದು ಒಳ್ಳೆಯದು ಇದೆ. ಇವತ್ತಿನದಿವಸ ರಿಟ್ ಹಾಕುವುದಕ್ಕೆ ಈ ಅಮೆಂಡ್‌ಮೆಂಟ್ ಪ್ರಕಾರ 6 ತಿಂಗಳು ಮಾಡಬಹುದು. ಮಾಡಿರಿ ಎಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು 31 ಮಾರ್ಚ್ 1991 ಎಂದು ಮಾಡಿರುತ್ತೇವೆ. 150 ಡೇಸ್ ಎಂದು ಮಾಡಿರುತ್ತೇವೆ. ಈ ಸೆಕ್ಷನ್‌ಗೆ ಅಮೆಂಡ್‌ಮೆಂಟ್ ಇದೆ. ಆ ಕ್ಲಾಸ್ ಬಂದಾಗ ಅಮೆಂಡ್ ಮಾಡುತ್ತೇನೆ. ಅಪ್‌ಲೆಟ್ ಟ್ರಿಬ್ಯೂನಲ್‌ನಿಂದ, ಹೈಕೋರ್ಟಿಗೆ ಕೇಸ್ ಫೈಲ್ ಮಾಡುವುದಕ್ಕೆ 31 ಮಾರ್ಚ್ 1991ರವರೆಗೆ ಹೆಚ್ಚು ಮಾಡಿದ್ದೇವೆ. We have extended upto 31st March 1991 instead of January.

ಶ್ರೀ ಆರ್. ವಿ. ದೇಶಪಾಂಡೆ : ಇವರೇನು ಪಾಯಿಂಟ್ ರೈಸ್ ಮಾಡುತ್ತಿದ್ದಾರಲ್ಲ, ಅದು ವೆರಿ ಸೀರಿಯಸ್ ಪಾಯಿಂಟ್. ಇದು ಮಹಾರಾಷ್ಟ್ರ, ಗೋವಾ, ಎಲ್ಲೂ ಇಲ್ಲ, ಅಂದರೆ ಇನ್‌ಕಮ್ ಲಿಮಿಟ್ ತೆಗೆಯಿರಿ ಎಂದು ಏನು ಹೇಳುತ್ತಿದ್ದಾರೆ ಅದು ಬಹಳ ಮುಖ್ಯವಾದುದು. ಇದೂ ಮಹಾರಾಷ್ಟ್ರ, ಗೋವಾ, ಆಂಧ್ರ ಎಲ್ಲೂ ಇಲ್ಲ. ಆದುದರಿಂದ please seriously think about it.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಹಾರಾಷ್ಟ್ರದೊಳಗೆ ಅಗ್ರಿಕಲ್ಚರಿಸ್ಟ್‌ಗೆ 50 ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದಾರೆ. ಯಾರು ಒಳ್ಳೆಯ ಅಗ್ರಿಕಲ್ಚರ್ ಮಾಡುತ್ತಾರೆ ಮಾಡಿರಿ ಎಂದು ಪ್ರೋತ್ಸಾಹ ಕೊಡುತ್ತಿದ್ದಾರೆ. ನಾವು ಯಾರಾದರೂ ಇನ್‌ಟೆನ್ಸೀವ್ ಅಗ್ರಿಕಲ್ಚರ್ ಮಾಡುತ್ತೇವೆ ಎಂದರೆ ಈ ಕಾಯಿದೆ ಅಡ್ಡಬರುತ್ತದೆ. ಒಬ್ಬ ರಿಟೈರ್ ಅದನಂತರ ಊರಿಗೆ ಹೋಗಿ ನಾಲ್ಕು ಎಕರೆ ಹೊಲ ತೆಗೆದುಕೊಂಡು ಮಾಡಬೇಕೆಂದರೆ, ಮಾಡುವುದಕ್ಕೆ ಬರುವುದಿಲ್ಲ. ಆದರೆ ಬೆಂಗಳೂರು ಕಡೆ ಮಾಡಬಾರದೆಂದು ಏನು ಮಾಡಿದ್ದೀರಿ, ತಮ್ಮ ಉದ್ದೇಶ ಚಲೋ ಇದೆ. ಕಾಯಿದೆ ತಂದು ಒಳ್ಳೆಯದನ್ನು ಮಾಡುವಾಗ ಕೆಲವು ಕೆಟ್ಟದ್ದೂ ಇರುತ್ತವೆ. ಬ್ರಾಡರ್ ಸೆನ್ಸ್‌ನಲ್ಲಿ ನೀವು ತೆಗೆದುಕೊಂಡು ಒಂದು ಒಳ್ಳೆಯ ಕೆಲಸ ಮಾಡಿರುತ್ತೀರಿ. ಇನ್ನೂ ಹೆಚ್ಚಾಗಿ ತಾವು ದಯವಿಟ್ಟು ಥಿಂಕ್‌ಓವರ್ ಮಾಡಿ, ಇದನ್ನು ಡಿಲೀಟ್ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈಗಾಗಲೇ ಖರೀದಿ ಆದ ಜಮೀನುಗಳನ್ನು ರಿಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಟ್ಟು ಖಾಯಂ ಮಾಡಿ. ನಾಲ್ಕು ಸಾವಿರಕ್ಕೆ ಖರೀದಿ ಮಾಡಿದ್ದರೆ ಇನ್ನೂ ನಾಲ್ಕು ಸಾವಿರ ಪೆನಾಲ್ಟಿ ಹಾಕಿ, ಕೊಡುತ್ತಾರೆ. ಈಗಾಗಲೇ ಅದರಲ್ಲಿ ಬೋರ್ ತೆಗೆಸಿದ್ದಾರೆ, ಇಲೆಕ್ಟ್ರಿಸಿಟಿ

ಇದೆ, ಆದುದರಿಂದ ಬಿಟ್ಟು ಹೋಗುವುದಕ್ಕೆ ಬರುವುದಿಲ್ಲ. ಇದರಿಂದ ನಿಮ್ಮ ಸರಕಾರಕ್ಕೆ ಒಳ್ಳೆಯ ಹೆಸರೂ ಬರುತ್ತದೆ, ರೊಕ್ಕ ಸಹ ಬರುತ್ತದೆ. 20 ಸಾವಿರಕ್ಕೆ ಖರೀದಿ ಮಾಡಿದ್ದರೆ, 20 ಸಾವಿರ ಪೆನಾಲ್ಟಿ ಹಾಕಿ, ಆದರೆ ಅವರಿಗೆ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಟ್ಟು ಖರೀದಿಯನ್ನು ಖಾಯಂ ಆಗುವಹಾಗೆ ಮಾಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಉಪಾಧ್ಯಕ್ಷಣಿಯವರೇ, ಸ್ವಾಗತ ಮಾಡತಕ್ಕಂಥ ಕಾನೂನು ತಂದಿದ್ದರೂ ಸಹ, ಇದನ್ನು ಪೂರ್ಣ ಮನಸ್ಸಿನಿಂದ ಸ್ವಾಗತ ಮಾಡುವುದಕ್ಕೆ ಆಗುವುದಿಲ್ಲ. ಮುಖ್ಯವಾಗಿ 79(ಎ) ನಲ್ಲಿ ಏನಿದೆ, ಇದು ಕೃಷಿಯೇತರ ಉತ್ಪನ್ನ 12 ಸಾವಿರಕ್ಕಿಂತ ಹೆಚ್ಚು ಇದ್ದರೆ ಭೂಮಿಯನ್ನು ಪಡೆಯುವುದಕ್ಕೆ ಅಥವಾ ಖರೀದಿ ಮಾಡುವುದಕ್ಕೆ ಅನರ್ಹರಾಗಿದ್ದಾರೆ ಎಂಬ ಕಾನೂನು ಇತ್ತು. ಕಳೆದ ಬಜೆಟ್ ಅಧಿವೇಶನದಲ್ಲಿ ಇದನ್ನು ತೆಗೆದುಹಾಕಬೇಕೆಂದು, ಇದರಿಂದ ತೊಂದರೆಯಾಗಿದೆ ಹಾಗೂ ಭ್ರಷ್ಟಾಚಾರ ಹೆಚ್ಚಾಗಿದೆ ಎಂದು ಎರಡು ಪಕ್ಷದ ಸದಸ್ಯರಿಂದ ಸಲಹೆ ಸೂಚನೆಗಳು ಬಂದಿದ್ದವು. ಆದುದರಿಂದ ಇದನ್ನು ಈಗ ತಂದಿದ್ದಾರೆ. ಆದರೆ 50 ಸಾವಿರ ರೂಪಾಯಿಗಳವರೆಗೆ ಮಾತ್ರ ಏರಿಸಿದ್ದಾರೆ. ಯಾರೂ ಈ ದೇಶದಲ್ಲಿ ಸಾವಿರಾರು ಕೋಟಿ ಬಂಡವಾಳಶಾಹಿಗಳು ಇದ್ದಾರೆ, ಅವರು ನೂರಾರು ದೊಡ್ಡ ದೊಡ್ಡ ಉದ್ಯಮಗಳನ್ನು ತರೆದಿದ್ದರೂ ಸಹಿತ, ಸಾವಿರಾರು ಕೋಟಿ ರೂ.ಗಳ ಬಂಡವಾಳಶಾಹಿಗಳಾದರೂ ಸಹಿತ ಈ ಜಗತ್ತಿನಾದ್ಯಂತ ಶ್ರೀಮಂತಿಕೆ ಇದ್ದರೂ ಸಹಿತ ಅವರಿಗೆ ಮಾತ್ರ ಈ ದೇಶದಲ್ಲಿ ಕಾನೂನು ಇಲ್ಲ, ನಿಯಂತ್ರಣ ಇಲ್ಲ. ಅವರು ಕೋಟಿಗಟ್ಟಲೆ ಉತ್ಪಾದನೆ ಮಾಡಬಹುದು, ಮಾರಬಹುದು ಮಿಲ್‌ಗಳನ್ನು ತೆರೆಯಬಹುದು. ಯಾರು ಗ್ರಾಮೀಣ ಪ್ರದೇಶದಲ್ಲಿದ್ದಾರೆ, ಯಾರು ಒಂದು ಸಣ್ಣ ಕೆಳದರ್ಜೆ ನೌಕರಿಯಲ್ಲಿರುವ ಸಿಬ್ಬಂದಿ ಇದ್ದಾರೆ ಅವರಿಗೆ 50 ಸಾವಿರ ಮಿತಿ ಎಂದು ಹೇಳುತ್ತೀರಿ.

ನಿವೃತ್ತಿ ಹೊಂದಿದ ಅಧಿಕಾರಿಗಳು ಅವರು ಹೋಗಿ ವ್ಯವಸಾಯ ಮಾಡಲು ಜಮೀನು ಪಡೆಯಲು ಈಗಿನ ಸ್ಥಿತಿಯಲ್ಲಿ ಸಾಧ್ಯ ಇಲ್ಲ. ನಿಜವಾಗಿಯೂ ಈಗಿನ ಕಾನೂನು ಜನರ ಪರವಾಗಿ ಅಥವಾ ಸಾಮಾಜಿಕ ತತ್ವದ ಮೇಲೆ ಇಲ್ಲ. ಯಾವ ಒಂದು ಸಾಮಾಜಿಕ ನ್ಯಾಯ ಎಂದು ಹೇಳುತ್ತೇವೆಯೋ ಅದಕ್ಕೆ ವಿರುದ್ಧವಾಗಿ ಇದೆ. ಮತ್ತು ಮಾರತಕ್ಕಂಥ ರೈತರಿಗೆ ಹೆಚ್ಚಿನ ಬೆಲೆಸಿಗುವ ವ್ಯವಸ್ಥೆ ಇರಲಿಲ್ಲ. ಯಾರ ಕೈಯಲ್ಲಿ ಹಣ ಇತ್ತೋ, ಅವರು ಬಂದು ಖರೀದಿ ಮಾಡಬೇಕಾಗಿತ್ತು. ಆಗಲೂ ಸಹ ರೈತರಿಗೆ ಸರಿಯಾದ ಬೆಲೆ ಸಿಗುತ್ತಿರಲಿಲ್ಲ. ಈಗ ಹೆಚ್ಚು ಮಾರುವುದು ಸ್ವಾಗತ. ಆದರೆ ಸರ್ಕಾರ ಇದನ್ನು ಇಡತಕ್ಕಂಥ ಅವಶ್ಯಕತೆ ಇರಲಿಲ್ಲ. ಕಾರಣ ಹಿಂದೂ ಜಾಯಿಂಟ್ ಫ್ಯಾಮಿಲಿ ಇರುತ್ತದೆ. ಅದರಲ್ಲಿ ಮಕ್ಕಳು ಇರುತ್ತಾರೆ. ಇಂತಹ ಸಂದರ್ಭದಲ್ಲಿ ತಾವು 50 ಸಾವಿರ ರೂಪಾಯಿಗಳ ಒಂದು ಲಿಮಿಟ್ ಇಟ್ಟರೆ ಸರಿಯಾಗುವುದಿಲ್ಲ. ಇದನ್ನು ಏತಕ್ಕೆ ಇಟ್ಟಿದ್ದೀರಿ? ಇದನ್ನು ಪೂರ್ಣವಾಗಿ ತೆಗೆದು ಹಾಕಬೇಕು ಇವತ್ತು ಬೇರೆ ಶ್ರೀಮಂತರಿಗೆ ಯಾವುದೇ ನಿರ್ಬಂದ ಇಲ್ಲ. ಗ್ರಾಮೀಣ ಜನರಿಗೆ ಈ ರೀತಿ ನಿರ್ಬಂದ ಹಾಕುವುದು ಸರಿಯಲ್ಲ. ದಯಮಾಡಿ ಮಾನ್ಯ ಸಚಿವರು ಈಗ ಏನು ಮನಸ್ಸು ಮಾಡಿದ್ದಾರೆ ಅದೇ ರೀತಿ ಈ ಬಗ್ಗೆ ಕೂಡ ಪೂರ್ಣ ಮನಸ್ಸು ಮಾಡಬೇಕು. ನಿಯಮ 79(ಎ) ಪೂರ್ಣ ತೆಗೆದುಹಾಕಬೇಕು. ಇದು ಇನ್ನು ಮುಂದೆ ಆಗತಕ್ಕಂಥ ವ್ಯವಹಾರಗಳ ಬಗ್ಗೆ ಇದು ಅನ್ವಯ ಆಗುತ್ತದೆ. ಇಲ್ಲಿಯವರೆಗೆ ಅನೇಕ ವ್ಯವಹಾರಗಳು ಏನು ಆಗಿವೆ, ಅವು ಇದರ ವ್ಯಾಪ್ತಿಯಲ್ಲಿ ಬಾರದೆ ಇದ್ದರೂ ಖರೀದಿಯಾದ ಕೂಡಲೇ ರೆವಿನ್ಯೂ ಇಲಾಖೆಯಿಂದ ನೋಟೀಸ್

ಕೊಡುತ್ತಾರೆ. ಇದರಿಂದ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಇದನ್ನು ರೆಟ್ರಾಸ್‌ಪೆಕ್ಟೀವ್ ಎಫೆಕ್ಟ್ ಕೊಡದಿದ್ದರೆ ಈಗಿರುವ ಪ್ರಕರಣಗಳ ಗತಿ ಏನು? ಅವರಿಗೆ ಇವತ್ತು ಪರಿಹಾರ ಕೊಡಬೇಕು. ಮಾನ್ಯ ಸಚಿವರು ಇವೆಲ್ಲವನ್ನೂ ಬಲ್ಲರು..

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ನಿವೃತ್ತಿಯಾದ ಮೇಲೆ ವ್ಯವಸಾಯಕ್ಕೋಸ್ಕರವೇ ಭೂಮಿ ಕೊಂಡುಕೊಳ್ಳತಕ್ಕಂಥಾದ್ದು ಬೇರೆ. ಆದರೆ ಇದಕ್ಕೆ ನಾನಾ ಕಾರಣಗಳು ಇವೆ. ಇದರಲ್ಲಿ ಬ್ಲಾಕ್ ಮನಿ ಈ ದೇಶದಲ್ಲಿ ಏನು ಇದೆ ಅದನ್ನು ಇದರಲ್ಲಿ ತೊಡಗಿಸುವವರು ಇದ್ದಾರೆ. ಆದ್ದರಿಂದ ನಾನು ಈಗಾಗಲೇ ಒತ್ತಾಯ ಮಾಡಿದಂತೆ, ಅಂತಹವರ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು. ಅದರಲ್ಲೂ ವ್ಯಾಪಕವಾಗಿ ಬೆಂಗಳೂರಿನ ಸುತ್ತಮುತ್ತ ನಡೆದಿದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲು ತಮಗೆ ಧೈರ್ಯ ಇಲ್ಲ. ಅದು ನನಗೆ ಗೊತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇವತ್ತು ನಾವು ಏತಕ್ಕೆ 50 ಸಾವಿರದಿಂದ ಒಂದು ಲಕ್ಷ ರೂಪಾಯಿಗಳವರೆಗೂ ಹೆಚ್ಚು ಮಾಡಿ ಎಂದು ಕೇಳುತ್ತಿದ್ದೇವೆಂದರೆ ತಮಗೆ ತಿಳಿದ ಪ್ರಕಾರ ಸರ್ಕಾರಿ ನೌಕರರ ಮಕ್ಕಳಿಗೆ ಮುಂದೆಯೂ ನೌಕರಿ ಸಿಗುತ್ತದೆ ಎನ್ನುವ ಖಾತರಿ ಇಲ್ಲ. ಆದ್ದರಿಂದ ಸರ್ಕಾರಿ ನೌಕರಿಯಿಂದ ನಿವೃತ್ತಿಯಾದ ಮೇಲೆ ಅವರ ಮಕ್ಕಳಿಗೆ ಹಳ್ಳಿಗಳಲ್ಲಿ ಜಮೀನು ತೆಗೆದುಕೊಟ್ಟು ಅಲ್ಲಿ ವ್ಯವಸಾಯ ಮಾಡುವಂಥಹ ಪ್ರಸಂಗ ಬಂದರೂ ಬರಬಹುದು. ಆದ್ದರಿಂದ ತಾವು ಈಗ ಈ ಮಿತಿಯನ್ನು 50 ಸಾವಿರ ರೂಪಾಯಿಗಳಿಂದ ಒಂದು ಲಕ್ಷದವರೆಗೂ ಹೆಚ್ಚು ಮಾಡಿ ಎಂದು ನಾವು ಕೇಳುವುದು. ಇದರ ಅಗತ್ಯ ಬಹಳವಾಗಿದೆ ಎಂದು ನಾವು ಹೇಳುತ್ತಿರುವುದು.

ಶ್ರೀ ಬಿ.ಎಚ್. ಬನ್ನಿಕೋಡ್ : ಇದಕ್ಕೆ ತಾವು ಯಾವ ಕಾರಣವನ್ನು ಹೇಳುವಂಥ ಅವಶ್ಯಕತೆ ಇಲ್ಲ. ತಮ್ಮದ್ದು ಒಳ್ಳೆಯ ಉದ್ದೇಶ ಇದೆ. ಈಗ ಇದು ಭ್ರಷ್ಟಾಚಾರಕ್ಕೆ ಎಡೆ ಕೊಡುತ್ತಿದೆ ಈ ಬಗ್ಗೆ ಎಲ್ಲರೂ ಸಮಾನವಾಗಿ ಕಾಣಬೇಕು. ಇಲ್ಲದಿದ್ದರೆ ಸಂವಿಧಾನದತ್ತವಾದ ಸಮಾನತೆಯ ಹಕ್ಕುಗಳನ್ನು ಕಸಿದುಕೊಂಡಂತೆ ಆಗುತ್ತದೆ. ಆದ್ದರಿಂದ ಇದನ್ನು ತಾವು ದಯಮಾಡಿ ತೆಗೆಯಬೇಕು. ಗ್ರಾಮಾಂತರ ಪ್ರದೇಶದ ಜನರಿಗೆ ಹಾಗೂ ರೈತರಿಗೆ ಒಳ್ಳೆಯ ಬೆಲೆ ಸಿಗುತ್ತದೆ. ಮತ್ತು ಹೊಸದಾಗಿ ವ್ಯವಸಾಯ ಮಾಡುವವರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಮಾನ್ಯ ಸಚಿವರು ಒಳ್ಳೆಯ ಮನಸ್ಸು ಮಾಡಿ ಇದನ್ನು ತೆಗೆದುಹಾಕಿದರೆ ಎಲ್ಲರಿಗೂ ನ್ಯಾಯ ಸಿಗುತ್ತದೆಂದು ನಾನು ಹೇಳುತ್ತೇನೆ. ಇನ್ನು ಪರಿಹಾರ ಕೊಡುವಂತಹದ್ದರಲ್ಲಿ ಮನ್ನಾ ಮಾಡಿದ್ದೇವೆಂದು ಹೇಳಿದಿರಿ. ಗೇಣಿದಾರರಿಂದ ಅನೇಕ ಸಲ ಬಲಾತ್ಕಾರದಿಂದ ಸಾಲ ವಸೂಲಿ ಮಾಡಿದ್ದಾರೆ ಮತ್ತು ಅವರ ಮನೆಗಳನ್ನು ಸಹ ಜಪ್ತಿ ಮಾಡಿದ್ದಾರೆ. ಈ ರೀತಿ ಎಲ್ಲರಿಂದ ವಸೂಲಿಮಾಡಿ ತಾವು ಕೊನೆ ಗಳಿಗೆಯಲ್ಲಿ ಇದನ್ನು ಮಾಡಿದ್ದೀರಿ ಇದರಿಂದ ಏನೇನು ಪ್ರಯೋಜನವಾಗುವುದಿಲ್ಲ. ಬಡವರಿಗೆ ಅನುಕೂಲವಾಗಬೇಕಾದರೆ 10ಎಕರೆ ಒಳಗೆ ಇರುವಂತಹ ಗೇಣಿದಾರರಿಂದ ಏನು ವಸೂಲಿ ಮಾಡಿದ್ದಾರೆ, ಅದನ್ನು ಪುನ: ಅವರಿಗೆ ವಾಪಸ್ಸ್ ಕೊಟ್ಟರೆ ಮಾತ್ರ ಅವರಿಗೆ ಪ್ರಯೋಜನವಾಗುತ್ತದೆ. ತಾವೇ ಹೇಳಿದ ರೀತಿಯಲ್ಲಿ ಈ ಹಣ ಸುಮಾರು 10 ಕೋಟಿ ರೂಪಾಯಿಗಳು ಇರಬಹುದು, ಈ ಮಸೂದೆ ತಂದ ಮೇಲೆ ಈ ಹಣವನ್ನು ಅವರಿಗೆ ವಾಪಸ್ಸ್ ಕೊಟ್ಟರೆ ಮಾತ್ರ ಈಗ ತಾವು ತಂದಿರತಕ್ಕಂಥ ತಿದ್ದುಪಡಿಯಿಂದ ಅವರಿಗೆ ಪ್ರಯೋಜನವಾಗುತ್ತದೆಂದು ಹೇಳುತ್ತೇನೆ. ಇನ್ನು ಗೊತ್ತಿರಬಹುದು, ಪಹಣಿಗಳಲ್ಲಿ ಇವತ್ತು ನಿಜವಾದ ಗೇಣಿದಾರರ ಹೆಸರು ಇರುವುದಿಲ್ಲ, ಫೇಕ್ ಎಂಟ್ರೀಸ್ ಇರುವುದರಿಂದ ಅವರಿಗೆ ಸಾಲ ಸೋಲ ಮಾಡಲು ಸಹ ಆಗುವುದಿಲ್ಲ.

ಆದ್ದರಿಂದ ಮಾನ್ಯ ಸಚಿವರು ಈ ಫೇಕ್ ಎಂಟ್ರೀಸ್ ಬಗ್ಗೆ ಸಹಿತ ಒಂದು ತಿದ್ದುಪಡಿ ತಂದು ಎಲ್ಲಿ ಗೇಣಿ ಅರ್ಜಿ ಹಾಕಿಲ್ಲ ಅಲ್ಲಿ ಸಾಲ ಸಿಗುವಂತೆ ಮಾಡಲು ಫೇಕ್ ಎಂಟ್ರಿ ಕಡಿಮೆ ಮಾಡುವುದಕ್ಕೆ ಈ ಒಂದು ಕಾನೂನಿಗೆ ತಿದ್ದುಪಡಿ ತರಬೇಕೆಂದು ಅವರಲ್ಲಿ ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಸನ್ಮಾನ್ಯ ಅಧ್ಯಕ್ಷಣಿಯವರೆ, ಈಗ ಏನು ಭೂಸೂಧಾರಣಾ ಕಾನೂನಿಗೆ ತಿದ್ದುಪಡಿ ತಂದಿದ್ದಾರೆ, ಅದರ ಫಲ ಬಡಗೇಣೀದಾರರಿಗೆ ಹೋಗಬೇಕೆಂಬ ಮಾತನ್ನು ಗೇಣೀದಾರರ ಪರ ಹೋರಾಟ ಮಾಡಿದಂಥ ಕಾಗೋಡು ತಿಮ್ಮಪ್ಪನವರು ಮತ್ತು ಸರಕಾರದ ಈಗಿನ ಮುಖಂಡರು ಏನಿದ್ದಾರೆ, ಅವರೂ ಸಹ ಗೇಣೀದಾರರ ಪರ ಹೋರಾಟ ಮಾಡಿದ್ದೇವೆ ಎಂಬ ಮಾತನ್ನು ಹೇಳಿದರು. ಆದರೆ ಆ ಹೋರಾಟ ಸಾಗರ ಮತ್ತು ಸೊರಬಕ್ಕೆ ಮಾತ್ರ ಮೀಸಲಾಗಬೇಕೇ ಅಥವಾ ಆ ಹೋರಾಟದ ಫಲ ಕರ್ನಾಟಕದ ಎಲ್ಲ ಬಡ ಗೇಣೀದಾರರಿಗೆ ಆಗಬೇಕೇ ಎಂಬುದನ್ನು ತಾವು ಯೋಚನೆ ಮಾಡಬೇಕು. ಯಾವುದೇ ಒಂದು ತೀರ್ಮಾನವನ್ನು ತಾವು ಮಾಡಿದಾಗ, ಆ ತೀರ್ಮಾನದ ಫಲ, ದೇಶದಲ್ಲಿ ಯಾರಿಗೆ ಆಗುತ್ತದೆ ಎಂದರೆ, ಒಬ್ಬ ಗೇಣೀದಾರ ಇರಬಹುದು, ಸಾಲಗಾರ ಇರಬಹುದು, ಯಾರು ತಮ್ಮ ಬಾಕಿ ಹಣವನ್ನು ಸರಿಯಾದ ಕಾಲದಲ್ಲಿ ಮರುಪಾವತಿ ಮಾಡುವವರಿಗೆ ನೀವು ಯಾವುದೇ ರಿಯಾಯಿತಿ ಕೊಡುತ್ತಿಲ್ಲ. ಬಡ್ಡಿ ರಿಯಾಯಿತಿ ಆಗಿರಬಹುದು, ಅಥವಾ ಸಾಲ ಮನ್ನಾ ಆಗಿರಬಹುದು ಅಥವಾ ತಾವೇನು ಈಗ ತೀರ್ಮಾನ ಮಾಡಿ ಗೇಣೀದಾರರಿಗೆ ಕಂತುಗಳ ಪರಿಹಾರ ಕೊಡುತ್ತಿದ್ದೀರಿ, ಆ ಕಂತುಗಳನ್ನು ಬಾಕಿ ಉಳಿಸಿಕೊಂಡಿರುವ ಬಾಕೀದಾರರಿಗೆ ಮಾತ್ರ ಅನ್ವಯವಾಗುವಂತಹ ತಿದ್ದುಪಡಿ ಇದಾಗಿದೆ. ನಿಜವಾಗಿಯೂ ಯಾವ ಗೇಣಿದಾರರಿಗೆ ಮಾತ್ರ ತನ್ನ ಹಣವನ್ನು ಮರುಪಾವತಿ ಮಾಡಿದ್ದಾನೆ ಅಂತಹ ಗೇಣೀದಾರನಿಗೂ ಸಹ ಇದರ ಫಲ ಹೋಗಬೇಕೆಂದು ತಾವು ಈ ಕಡೆ ಇದ್ದಾಗ ಹೇಳುತ್ತಿದ್ದೀರಿ. ಆದರೆ ಈ ಕಾನೂನಿನಲ್ಲಿ ಯಾರೂ ಈಗಾಗಲೇ ಹಣವನ್ನು ಪಾವತಿ ಮಾಡಿರುತ್ತಾರೆ. ಅವರಿಗೆ ಅದನ್ನು ಮರುಪಾವತಿ ಮಾಡುವಂತಹ ಅಥವಾ ಮರು ಸಂದಾಯ ಮಾಡುವಂತಹ ಒಂದು ಅವಕಾಶ ಇದರಲ್ಲಿ ಇಲ್ಲ. ಆದುದರಿಂದ ಇದರ ಬಗ್ಗೆ ತಾವು ಆಲೋಚನೆ ಮಾಡಬೇಕು. ಇದೊಂದೇ ಕಾನೂನು ಅಲ್ಲ; ತಾವು ಪಾಸ್ ಮಾಡಿಸಿಕೊಂಡಂತಹ ಇನ್ನೂ ಕೆಲವು ಕಾನೂನುಗಳ ಬಗ್ಗೆ ಸಹ ಹಿಂದಿನ ಸರಕಾರ ತತ್ವಶ: ಒಪ್ಪಿಕೊಂಡಿತ್ತು. ಅದರ ಬಗ್ಗೆ ಕಾನೂನನ್ನು ಸಹ ಸಿದ್ಧಪಡಿಸಿತ್ತು. ಕೆಲವು ಸಂದರ್ಭದಲ್ಲಿ ಹೀಗೆ ಆಗುತ್ತದೆ. ಯಾರೇ ಕೆಲಸ ಮಾಡಿದರೂ ಹೆಸರು ಬೇರೆಯವರಿಗೆ ಬರುತ್ತದೆ. ಅದರಂತೆ ಇಲ್ಲಿಯೂ ಆಗಿದೆ. ಸಂತೋಷ : ಹೆಸರು ನಿಮಗೇ ಬಂದರೂ ಪರವಾಗಿಲ್ಲ. ಹಿಂದಿನ ಸರಕಾರ ತತ್ವಶ: ಏನು ಒಪ್ಪಿತ್ತು, ಏನು ಮಸೂದೆಗಳನ್ನು ತಯಾರು ಮಾಡಿತ್ತು, ಅವುಗಳನ್ನು ಈ ಸದನದಲ್ಲಿ ತಾವು ಮಂಜೂರಾತಿಗಾಗಿ ತಂದಿದ್ದೀರಿ. ಇದರ ಬಗ್ಗೆ ಅಭಿನಂದನೆ ಮಾಡುತ್ತೇನೆ. ಆದರೆ ತಾವೇನು 79(ಎ) ಬಗ್ಗೆ ಅಮೆಂಡ್‌ಮೆಂಟ್ ಮಾಡಿರುತ್ತೀರಿ, ಇದರ ಬಗ್ಗೆ ಪುನರಾಲೋಚನೆ ಮಾಡಬೇಕು. 1974ನೇ ಇಸವಿಯಲ್ಲಿ ವ್ಯವಸಾಯೇತರ ಆದಾಯ ಹೆಚ್ಚಾಗಿದ್ದರೆ ಭೂಮಿಯನ್ನು ಕೊಳ್ಳಬೇಕಾಗಿಲ್ಲ; ಕೊಳ್ಳುವುದೂ ಅಸಿಂಧುವಾಗುತ್ತದೆ ಎಂಬ ಕಾನೂನನ್ನು ಆಗಿನ ಸರಕಾರ ಮಾಡಿತ್ತು. ಅದು ಆದಮೇಲೆ ಸಾವಿರಾರು ಜನ ಈ ವಿಧಿಯ ವಿರುದ್ಧವಾಗಿ ಭೂಮಿಯನ್ನು ಕೊಂಡುಕೊಂಡಿದ್ದಾರೆ. ಇವತ್ತು ಯಾವ ಪರಿಸ್ಥಿತಿ ಇದೆ ಎಂದರೆ, ಇದರ ಬಗ್ಗೆ ತಾವೇನಾದರೂ ವಿಚಾರ ಮಾಡಿ, ಒಂದು

ತೀರ್ಮಾನ ಮಾಡಿದರೆ, ಬೇಕಾದಷ್ಟು ಭೂಮಿ ಸರಕಾರಕ್ಕೆ ಬರುತ್ತದೆ. ಆದರೆ ಇವತ್ತಿನ ದಿವಸ ಏನು ಅನ್ಯಾಯವಾಗುತ್ತಿದೆ ಎಂದರೆ, ಇದರ ಬಗ್ಗೆ ವಿಚಾರಣೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿರುವುದರಿಂದ ಭ್ರಷ್ಟಾಚಾರ ತಾಂಡವವಾಡುತ್ತಿದೆ. ತಾವು ಬೇಕಾದರೆ ನೋಡಬಹುದು. ನಮ್ಮ ಗಮನಕ್ಕೆ ಬಂದಿರುವುದನ್ನು ಉದಾಹರಣೆ ಕೊಡಿ ಎಂದರೆ ಕೊಡುತ್ತೇನೆ. ಇವತ್ತು ಈ ಪ್ರಕರಣಗಳಲ್ಲಿ ಸಂಬಂಧಪಟ್ಟ ವಿಲೇಜ್ ಅಕೌಂಟೆಂಟ್ ಇರಬಹುದು, ತಹಸೀಲ್ದಾರ್ ಇರಬಹುದು, ಅಸಿಸ್ಟೆಂಟ್ ಕಮೀಷನರ್ ಇರಬಹುದು, ಅನೇಕ ಸಂದರ್ಭಗಳಲ್ಲಿ ಯಾರು ಈರೀತಿ ಭೂಮಿಯನ್ನು ಕೊಂಡುಕೊಂಡಿದ್ದಾರೆ, ಅವರಿಗೆ ನೋಟೀಸ್ ಕೊಟ್ಟಿದ್ದಾರೆ. ನೋಟೀಸ್ ಕೊಟ್ಟಮೇಲೆ ಅಂತಿಮವಾಗಿ ತೀರ್ಮಾನ ಆಗಿರುವುದನ್ನು ತಾವು ನೋಡಿದ್ದೀರಾ? ಕಳೆದ ಹತ್ತಾರು ವರ್ಷಗಳಿಂದ ತಮ್ಮ ರೆವಿನ್ಯೂ ಇಲಾಖೆಯವರು ಯಾರಿಗೆ ಈ ರೀತಿ ನೋಟೀಸ್ ಕೊಟ್ಟಿದ್ದಾರೆ ಅವು ಇನ್ನೂ ತೀರ್ಮಾನವಾಗಿಲ್ಲ. ಏತಕ್ಕೋಸ್ಕರ ಆಗಿಲ್ಲ ಎಂದರೆ, ತಾವು ಯಾರಿಗೆ ನೋಟೀಸನ್ನು ಕಳುಹಿಸುತ್ತೀರಿ, ಅವರು ಸಂಬಂಧಪಟ್ಟ ವಿಲೇಜ್ ಅಕೌಂಟೆಂಟ್‌ಗಳನ್ನು ನೋಡುತ್ತಾರೆ. ಸಂಬಂಧಪಟ್ಟ ತಹಸೀಲ್ದಾರ್‌ರವರನ್ನು ನೋಡುತ್ತಾರೆ.ಸಂಬಂಧಪಟ್ಟ ಅಸಿಸ್ಟೆಂಟ್ ಕಮೀಷನರ್‌ರವರನ್ನು ನೋಡುತ್ತಾರೆ. ನೋಡಿದ ತಕ್ಷಣ ಆ ನೋಟೀಸ್ ಅಲ್ಲೇ ಉಳಿಯುತ್ತದೆ. ಇದಕ್ಕಿಂತ ಹೆಚ್ಚು ವಿವರಣೆ ನಾನು ಏನೇನೂ ಕೊಡಬೇಕಾಗಿಲ್ಲ ಎಂದು ಭಾವಿಸುತ್ತೇನೆ. ಏಕೆಂದರೆ ಇದು ಭ್ರಷ್ಟಾಚಾರಕ್ಕೆ ಒಂದು ದಾರಿ ಮಾಡಿಕೊಟ್ಟಿದೆ. ಆದುದರಿಂದ ಅಂತಿಮವಾಗಿ ತಾವು ಇದರ ಬಗ್ಗೆ ಲೆಕ್ಕಹಾಕಬೇಕು. 79(ಎ) ವಿಧಿಗೆ ವಿರುದ್ಧವಾಗಿ ಎಷ್ಟು ಭೂಮಿ ಮಾರಾಟವಾಗಿದೆ, ಎಷ್ಟು ಜನ ಈ ರೀತಿ ಮಾರಾಟವಾಗಿರುವುದನ್ನು ಕೊಂಡುಕೊಂಡಿದ್ದಾರೆ, ಇದರ ಬಗ್ಗೆ ಯಾವುದಾದರೂ ವಿಚಾರಣೆ ಆಗಿದೆಯೇ, ಅಂತಿಮವಾಗಿ ಸರಕಾರ ಯಾವುದಾದರೂ ಭೂಮಿಯನ್ನು ಫೋರ್‌ಫಿಟ್ ಮಾಡಿಕೊಂಡಿದೆಯೇ, ಎಂಬುದರ ಬಗ್ಗೆ ತಾವು ಆಲೋಚನೆ ಮಾಡಿದಾಗ ಇವು ವಿವಿಧ ಹಂತದಲ್ಲಿರುವುದು ಮಾತ್ರ ತಮ್ಮ ಗಮನಕ್ಕೆ ಬರುತ್ತದೆಯೇ ಹೊರತು, 79(ಎ) ವಿರುದ್ಧವಾಗಿ ಯಾರು ಭೂಮಿಯನ್ನು ಕೊಂಡುಕೊಂಡಿದ್ದಾರೆ, ಆ ಭೂಮಿಯನ್ನು ಕೊಂಡುಕೊಂಡಿರುವವರ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ; ತೆಗೆದುಕೊಂಡಿದ್ದರೆ ಎಷ್ಟು ಭೂಮಿಯನ್ನು ತಾವು ಸರಕಾರಕ್ಕೆ ಫೋರ್‌ಫಿಟ್ ಮಾಡಿಕೊಂಡಿದ್ದೀರಿ ಎಂಬುದನ್ನು ಹೇಳಿ. ಅದು ಯಾವುದೂ ಆಗಿಲ್ಲ. ಅದಕ್ಕೆ ಬದಲಿಗೆ ಸಂಬಂಧಪಟ್ಟ ಜನರು ಗೊತ್ತಿದ್ದೋ ಗೊತ್ತಿಲ್ಲದೆಯೋ ಏನು ಕೊಂಡುಕೊಂಡಿದ್ದಾರೆ, ಈ ರೀತಿ ಕೊಂಡುಕೊಂಡಿರುವವರನ್ನು ತಾವು ಶೋಷಣೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ. ಇದರ ಬಗ್ಗೆ ತಾವು ಆಲೋಚನೆ ಮಾಡಬೇಕು.

4.15 ಪಿ.ಎಂ

50 ಸಾವಿರಕ್ಕಿಂತ ಹೆಚ್ಚು ಮಾಡುವುದು ಎಷ್ಟು ಮುಖ್ಯವೋ, ಅಷ್ಟೇ ಇಲ್ಲಿಯವರೆಗೆ ಸಹ ಎಷ್ಟು ಪ್ರಕರಣಗಳಲ್ಲಿ ಮಾನ್ಯ ಬೈರೇಗೌಡರು ಹೇಳಿದ ಹಾಗೆ ದುರುದ್ದೇಶದಿಂದ ಶೋಷಣೆ ಮಾಡುವುದಕ್ಕೆ ಹೆಚ್ಚುಲಾಭ ಮಾಡುವುದಕ್ಕೆ, ಕಳ್ಳ ಪೇಟೆಯಲ್ಲಿ ಹೆಚ್ಚು ಹಣವನ್ನು ಏನು ಕೂಡಿಟ್ಟುಕೊಂಡಿದ್ದಾರೆ, ಅವರ ಸಂಬಂಧಬೇರೆ. ಆದರೆ ಯಾರು ನಿಜವಾದ ರೈತರು ಇದ್ದಾರೆ, ಅಥವಾ ಈ ಒಂದು ಕೃಷಿ ಕೆಲಸಕ್ಕೋಸ್ಕರ ಭೂಮಿಯನ್ನು ಕೊಂಡುಕೊಂಡಿದ್ದರೆ, ಅದರ ಬಗ್ಗೆ ತಾವು ಆಲೋಚನೆ ಮಾಡುವುದಾದರೆ, ಈ ಒಂದು ವಿಧಿ ಏನು ಇದೆ, ಅದನ್ನು ಅವರಿಗೆ ವಿನಾಯಿತಿಗೊಳಿಸಬೇಕು. ನಿಜವಾಗಿ ಈ ಭೂಮಿಯನ್ನು ವ್ಯವಸಾಯಕ್ಕೋಸ್ಕರವಾಗಿ

ಉಪಯೋಗಿಸಿಕೊಳ್ಳುವುದಾದರೆ ಇದರ ಬಗ್ಗೆ ತಾವು ಆಲೋಚನೆ ಮಾಡಬೇಕು. ಇಲ್ಲಿ ವ್ಯವಸಾಯೇತರ ಉಪಯೋಗಕ್ಕಾಗಿ ಮಾನ್ಯ ಬೈರೇಗೌಡರು ಹೇಳಿದ ಹಾಗೆ ಇಲ್ಲಿ ಕಟ್ಟಡವನ್ನು ಕಟ್ಟಲಿಕ್ಕೆ, ಸೈಟ್ ಮಾಡಲಿಕ್ಕೆ ಅಥವಾ ಮತ್ತೊಂದಕ್ಕೆ ಇವರು ಉಪಯೋಗ ಮಾಡಿಕೊಳ್ಳುವುದಾದರೆ ಆ ವಿಷಯ ಬೇರೆ. ಯಾರೂ ಭೂಮಿಯನ್ನು ವ್ಯವಸಾಯಕ್ಕೋಸ್ಕರ ಈ ಭೂಮಿಯನ್ನು ಉಪಯೋಗಿಸಿಕೊಂಡಿದ್ದಾರೆ ಅಂತಹವರಿಗೆ ತಾವು ವಿನಾಯಿತಿ ಕೊಡುವ ಬಗ್ಗೆ ಮನಸ್ಸು ಮಾಡಬೇಕೆಂದು ಈ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲದಿದ್ದರೆ ಇದರಿಂದ ಏನು ಉಪಯೋಗ ಆಗುವುದಿಲ್ಲ. ಇವತ್ತಿನ ದಿವಸ 12 ಸಾವಿರದಿಂದ 50 ಸಾವಿರ ರೂಪಾಯಿಗೆ ಹೆಚ್ಚಿಸಿದರೂ ಸಹ ಅದರ ಲಾಭ ಮುಂದೆ ಆಗಬಹುದು. ಆದರೆ ಇವತ್ತಿನ ದಿವಸ ಕಳೆದ ಸುಮಾರು 18 ಅಥವಾ 20 ವರ್ಷಗಳಿಂದ ಏನು ವ್ಯವಹಾರಗಳು ಆಗಿದ್ದಾವೆ, ಅವುಗಳಲ್ಲಿ ಯಾವುದನ್ನೂ ಸಹ ನಾನು ಕಂಡ ಹಾಗೆ ಸರ್ಕಾರ ಫೋರ್‌ಫೀಟ್ ಮಾಡಿಕೊಂಡಿಲ್ಲ. ಅದಕ್ಕೆ ಬದಲಾಗಿ ಶೋಷಣೆ ಮಾಡಲಿಕ್ಕೆ ಅವಕಾಶ ಇರುವಂತಹ ಈ ಒಂದು ಪರಿಸ್ಥಿತಿ ಏನು ಇದೆ, ಆ ಪರಿಸ್ಥಿತಿಯನ್ನು ತಾವು ಗಂಭೀರವಾಗಿ ಪರಿಗಣಿಸಿ ಅದನ್ನು ಹೋಗಲಾಡಿಸುವುದಕ್ಕೆ ಬೇಕಾದಂತಹ ನಿಯಮಗಳನ್ನು ಅಥವಾ ಕಾನೂನಿನ ತಿದ್ದುಪಡಿಯನ್ನು ಮಾಡಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತಾ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಸಭಾಧ್ಯಕ್ಷಿಣಿಯವರೇ, ಈ ಮಸೂದೆಯನ್ನು ಸ್ವಾಗತಿಸುತ್ತಾ ಸೆಕ್ಷನ್ 79(ಎ)ಗೆ ತಂದಿರತಕ್ಕಂಥ ತಿದ್ದುಪಡಿ ಶಾಸ್ತ್ರೀಯವಾಗಿಲ್ಲ ಎಂದು ಅಷ್ಟು ಮಾತ್ರ ಹೇಳುವುದಕ್ಕೆ ಬಯಸುತ್ತೇನೆ. ಶಾಸ್ತ್ರೀಯವಾಗಿ ಇಲ್ಲವೆಂದು ಹೇಳುವಾಗ 1974ರಲ್ಲಿ ಹಾಕಿರತಕ್ಕಂಥ 12 ಸಾವಿರದ ಮಿತಿ ಆವತ್ತಿನ ರೂಪಾಯಿನ ಬೆಲೆ ಮತ್ತು 1990ನೇ ಇಸವಿಯಲ್ಲಿರತಕ್ಕಂಥ ರೂಪಾಯಿನ ಬೆಲೆ ಇದಕ್ಕಾದರೂ ಸಾಮ್ಯ ಇರಬೇಕಲ್ಲ. ಈಗ ರೂಪಾಯಿನ ಬೆಲೆ ನನ್ನ ಲೆಕ್ಕದ ಪ್ರಕಾರ 9.06 ಪೈಸೆ ಅಥವಾ 10 ಪೈಸೆ ಇರಬಹುದು. 1974ರಲ್ಲಿ ಏನು ಇತ್ತು ಎಂದು ಆಮೇಲೆ ನಿಮಗೆ ವಿವರ ಕೊಡುತ್ತೇನೆ. ಆದ್ದರಿಂದ ಹಣದ ಬೆಲೆ ಕಡಿಮೆ ಆಗಿದೆ. ಇಲ್ಲಿ ರೂಪಾಯಿ 50 ಸಾವಿರ ಅಥವಾ 12 ಸಾವಿರ ಎನ್ನುವುದು ಮುಖ್ಯವಲ್ಲ. ಹಣದ ಬೆಲೆ ಅಥವಾ ಮೌಲ್ಯ ಕಡಿಮೆ ಆಗಿದೆ. ಇದು ಒಂದು ಭಾಗ. ಇಲ್ಲಿರತಕ್ಕ ಬಹುತೇಕ ಶಾಸಕರೆಲ್ಲಾ ವ್ಯವಸಾಯ ಕುಟುಂಬದಿಂದಲೇ ಬಂದಿರತಕ್ಕವರು. ಬಹಳ ಜನ ಇತ್ತೀಚೆಗೆ ಬೆಂಗಳೂರಿಗೆ ಬಂದ ಮೇಲೆ ಬೆಂಗಳೂರನ್ನು ಬಿಟ್ಟು ಹೋಗುವ ಮನಸ್ಸು ಇಲ್ಲ, ಇಲ್ಲಿ ಈಗಾಗಲೇ ಸೆಟಲ್ ಆಗಿದ್ದಾರೆ. ಬೇರೆ ಕಸುಬು ಗೊತ್ತಿಲ್ಲ. ಅದಕ್ಕೆ ವ್ಯವಸಾಯದಲ್ಲಿ ಏನಾದರೂ ಭೂಮಿ ಸಿಕ್ಕಿತೋ ಏನೋ ಎಂದು ಬಹಳಷ್ಟು ಜನ ಪ್ರಯತ್ನ ಮಾಡಿದ್ದಾರೆ. ಮುಖ್ಯಮಂತ್ರಿಗಳು, ಮಾಜೀ ಮುಖ್ಯಮಂತ್ರಿಗಳು, ಶಾಸಕರು, ಮಂತ್ರಿಗಳೂ ಬಹಳ ಜನಪ್ರಯತ್ನ ಮಾಡಿದ್ದಾರೆ. ಆದರೆ ಇಲ್ಲಿ ನೀವು 12 ಸಾವಿರ ರೂಪಾಯಿಗಳ ವರಮಾನ ಏನು ಇತ್ತು, ಆ ಕಾರಣಕ್ಕಾಗಿ ಬಹಳ ಜನ ಬೇನಾಮಿ ಹೆಸರಿನಲ್ಲಿ ಮಾಡಿದ್ದಾರೆ. ನಾವು ಶಾಸನವನ್ನು ಮಾಡುವಾಗ ಕಟು ಸತ್ಯವನ್ನು ಅರ್ಥ ಮಾಡಿಕೊಳ್ಳಬೇಕು. ಅವರಿಗೆ ಬೇನಾಮಿ ಹೆಸರಿನಲ್ಲಿ ಶಾಸಕರಿಗೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಶಾಸನದ ಮಹತ್ವ ಏನು ಉಳಿಯುತ್ತದೆ. ಆದ್ದರಿಂದ ನಾನು ನಿಮ್ಮಲ್ಲಿ ಕೇಳುತ್ತೇನೆ. ಇದು ಒಂದು ಭಾಗ. ನಾನು ಬರೇ ಭೂ ಶಾಸನ ಮಸೂದೆಯಿಂದ ಗೇಣೇದಾರರು ಮಾಲೀಕರಾಗಿರುವ ಪ್ರದೇಶದಿಂದ ಮಾತ್ರ ಬರುತ್ತಿಲ್ಲ. ಈ ರಾಜ್ಯಕ್ಕಾಗಿ ಈ

ರಾಷ್ಟ್ರಕ್ಕಾಗಿ ಬಹುತೇಕವಾಗಿ ಇರಿಗೇಷನ್ ಮತ್ತು ಪವರ್ ಪ್ರಾಜೆಕ್ಟ್‌ಗಳು ಬಂದಿರತಕ್ಕದ್ದು ನಮ್ಮ ಪ್ರದೇಶದಿಂದ ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕ್‌ನಲ್ಲಿ ಸುಮಾರು ಐದು ಪ್ರಾಜೆಕ್ಟ್‌ಗಳು ಬಂದಿವೆ. ಆ ಪ್ರಾಜೆಕ್ಟ್‌ಗಳಲ್ಲಿ ಮುಳುಗಿರತಕ್ಕ ರೈತರಿಗೆ ಎರಡು ತೊಂದರೆ. ಎರಡಲ್ಲ, ಮೂರ್‍ನಾಲ್ಕು ತೊಂದರೆಗಳು. ಮೊದಲನೇ ತೊಂದರೆ, ಹೊತ್ತಿಗೆ ಸರಿಯಾಗಿ ಪರಿಹಾರ ಕೊಡುವುದಿಲ್ಲ, 4(1) ನೋಟಿಫಿಕೇಶನ್ ಒಂದು ಸಾರಿ ಆಗುತ್ತದೆ, 6(1) ನೋಟಿಫಿಕೇಶನ್ ಮತ್ತೊಂದು ಸಾರಿ ಆಗುತ್ತದೆ. ಮೌಲ್ಯಮಾಪನ ಮೂರನೇ ಬಾರಿ ಆಗುತ್ತದೆ; ಇವತ್ತಿನವರೆಗೆ ವರಾಹಿ ಪ್ರಾಜೆಕ್ಟ್‌ನದು ಸರಿ ಸುಮಾರು 20 ವರ್ಷ ಆಗಿದೆ ; ಆಗಿಲ್ಲ. ಪರಿಹಾರ ಕೊಟ್ಟಮೇಲೆ ಬೇರೆ ಕಸುಬು ಗೊತ್ತಿಲ್ಲ. ಅವರು ಭೂಮಿ ತೆಗೆದುಕೊಳ್ಳಬೇಕು. ಕ್ಯಾಷ್ ಉಳಿಯುತ್ತದೆ. ನೀವು ಕೊಟ್ಟ ದುಡ್ಡು ಉಳಿಯುತ್ತದೆ. ಎಷ್ಟೋ ಕೊಟ್ಟಿರಬಹುದು, ಒಂದು ಎಕರೆಗೆ ಐದು ಸಾವಿರ ಅಥವಾ ಹತ್ತು ಸಾವಿರ ಕೊಟ್ಟಿರಬಹುದು. ಭೂಮಿ ಎಲ್ಲಾ ಮುಳುಗಿ ಹೋಯಿತು. ಆದ್ದರಿಂದ ಅವರು ನಾನು ಅಗ್ರಿಕಲ್ಚರಿಸ್ಟ್ ಆದರು. ಯಾವ ರಾಜ್ಯದ ಸಲುವಾಗಿ ಭೂಮಿಯನ್ನು ಕಳೆದುಕೊಳ್ಳುತ್ತಾರೋ ಆ ಭೂಮಿಯನ್ನು ಕಳೆದುಕೊಂಡ ಅಪರಾಧಕ್ಕಾಗಿ ಅವರು ನಾನ್ ಅಗ್ರಿಕಲ್ಚರಿಸ್ಟ್. ಅಗ್ರಿಕಲ್ಚರಿಸ್ಟ್ ಎಂದು ಸರ್ಟಿಫಿಕೇಟ್ ಕೊಡುವುದಿಲ್ಲ. ಅವರಿಗೆ ಬೇರೆ ಕಡೆಗೆ ಭೂಮಿಯನ್ನು ತೆಗೆದುಕೊಳ್ಳುವ ಹಾಗೆ ಇಲ್ಲ. ಇದು ಒಂದು ದೋಷ. ಎರಡನೆಯದು ನೀವು ಕೊಟ್ಟ ಹಣ ಬ್ಯಾಂಕಿನಲ್ಲಿ ಇಟ್ಟರೆ ಕೆಲವರಿಗೆ 10 ಲಕ್ಷ 20ಲಕ್ಷ 30 ಲಕ್ಷ ಬಂದಿರುವವರೂ ಇದ್ದಾರೆ. ಒಂದು ವರ್ಷದಲ್ಲಿ ಇದರಿಂದ ಬಂದಿರತಕ್ಕ ಬಡ್ಡಿಯನ್ನು ಬ್ಯಾಂಕಿನಿಂದ ಕೊಟ್ಟಿರುವುದನ್ನು ಲೆಕ್ಕ ಹಾಕಿದರೆ, 10 ಲಕ್ಷ ಇಟ್ಟಿರತಕ್ಕಂಥವರಿಗೂ ಒಂದು ಲಕ್ಷದ 20 ಸಾವಿರ ಬಡ್ಡಿ ಬರುತ್ತದೆ. ನೀವು 50 ಇಲ್ಲಿ ಸಾವಿರ ಮಿತಿ ಹಾಕಿದರೆ ಅವರು ಭೂಮಿ ಕೊಳ್ಳುವ ಹಾಗೆ ಇಲ್ಲ.

ಈ ಬಗ್ಗೆ ಇದ್ದ ಮಿತಿಯನ್ನು ಈಗ ತೆಗೆದಿದ್ದೀರಿ. ಈ ಬಗ್ಗೆ ನಾನು ಹೇಳುವುದಿಲ್ಲ. ಆದರೆ ಈ ಮುಳುಗಡೆ ಪ್ರದೇಶದ ರೈತನಿಗಾದರೂ ಇದರಿಂದ ವಿನಾಯಿತಿ ಸಿಗಬೇಕು ಇದಕ್ಕೆ ವೈಜ್ಞಾನಿಕವಾದ ಕಾರಣಗಳೇನು? 79 ಅನ್ನು ಇಟ್ಟುಕೊಳ್ಳುವುದಕ್ಕೆ ಕಾರಣವೇನು? ಇದು ಕಾನೂನಿನ ಅಮಲಿನಲ್ಲಿ ಬರುವುದಕ್ಕಿಂತ ಇದನ್ನು ಡಿಫೈನ್ ಮಾಡಿರುವವರ ಸಂಖ್ಯೆಯೇ ಹೆಚ್ಚು. ಸಾವಿರಾರು ರಿಟ್‌ಗಳು ಕೋರ್ಟಿನಲ್ಲಿ ಈಗಲೂ ತೀರ್ಮಾನವಾಗದೇ ಬಿದ್ದಿವೆ. 12 ಸಾವಿರ ಇದ್ದುದು 50 ಸಾವಿರ ಆದರೆ, ಆಗಿನ ರೂಪಾಯಿ ಮೌಲ್ಯಕ್ಕೂ ಸರಿಹೋಗುವುದಿಲ್ಲ ಆದ್ದರಿಂದ ಎಲ್ಲಾ ನಿಬಂಧನೆಗಳನ್ನೂ ರೈತರ ಮೇಲೆ ಹಾಕುತ್ತೀರಿ ಯಾವ ಶಾಸನ ತಂದರೂ ರೈತನ ಮೇಲೆಯೇ ಹಾಕುತ್ತೀರಿ ಯಡಿಯೂರಪ್ಪನವರು ಬೈರೇಗೌಡರು ಹೇಳಿದ ಹಾಗೆ ಕನಿಷ್ಟ ಒಂದು ಲಕ್ಷಕ್ಕಾದರೂ ಏರಿಸಿ. ಆಗಿನ ಕಂದಾಯಸಚಿವರ ಹತ್ತಿರ ನಾನೂ ಸಾಕಷ್ಟು ಇದರ ಬಗ್ಗೆ ಚರ್ಚೆ ಮಾಡಿದ್ದೆ. ಈಗ ಪುನ: 50 ಸಾವಿರ ಎಂದು ಮಾಡಿದ್ದೀರಿ. ಒಂದು ಸಲ ತಿದ್ದುಪಡಿ ಮಾಡಿದ ಮೇಲೆ ಪದೇ ಪದೇ ಮಾಡುವುದಕ್ಕೆ ಬರುವುದಿಲ್ಲ. 16 ವರ್ಷದ ನಂತರ ಈಗ ತಿದ್ದುಪಡಿ ತಂದಿದ್ದೀರಿ. ಇದನ್ನು ಬಹುತೇಕ ಸದಸ್ಯರು ಒಪ್ಪಿಕೊಳ್ಳುತ್ತಾರೆ ಡಿಸ್‌ಪೆನ್ಸ್ ಮಾಡುವುದು ಸಾಧ್ಯವಿಲ್ಲ ಎಂದರೆ ಇದನ್ನು ಹೆಚ್ಚು ಮಾಡಿ. ಆದರೆ ಬೈರೇಗೌಡರು ಸ್ವಲ್ಪ ಸಂಶಯ ಹೊಂದಿದ್ದಾರೆ, ಏನೆಂದರೆ ಕಪ್ಪು ಹಣದವರು ಇಲ್ಲಿ ಬಂದು ಇನ್‌ವೆಸ್ಟ್ ಮಾಡುತ್ತಾರೆಂದು. ಅದೇ ಮೂಲ ಕಾರಣ 74ರಲ್ಲಿ ಈ 79 ಎ ಸೆಕ್ಷನ್ ತರುವುದಕ್ಕೆ.

ಶ್ರೀ ಸಿ. ಬೈರೇಗೌಡ: ಈ ಕಾನೂನು ಆದಾಗ ನಾನೂ ಕೂಡ ಇದ್ದೆ. ಮಾನ್ಯ ದೇವರಾಜಅರಸರು ಆಗ ಮುಖ್ಯಮಂತ್ರಿಗಳಾಗಿದ್ದರು. ಇದು ಚರ್ಚೆಗೆ ಬಂದಾಗ ಒಬ್ಬರಿಗೆ ಒಂದು ಉದ್ಯೋಗ ಎನ್ನುವ ತತ್ವಕ್ಕೆ ಕಟ್ಟುಬಿದ್ದು ಈ ಕಲಂ ಅನ್ನು ಜಾರಿಯಲ್ಲಿ ತರಲಾಯಿತು.

ಶ್ರೀ ಬಿ. ಎಸ್. ಯಡಿಯೂರಪ್ಪ : ಅದು ಆವತ್ತಿನ ಕಾಲ ಸ್ವಾಮಿ? ಇವತ್ತು ಉದ್ಯೋಗಗಳು ಎಲ್ಲಿವೆ ಹೇಳಿ?

ಶ್ರೀ ಡಿ.ಬಿ. ಚಂದ್ರೇಗೌಡ : ಇವತ್ತು ಸರ್ಕಾರಿ ನೌಕರರಿಗೆ ಬರುವ ವರಮಾನವನ್ನು ಪರಿಗಣಿಸಿ ಕನಿಷ್ಟ ಒಂದು ಲಕ್ಷಕ್ಕಾದರೂ ಏರಿಸಿ. ಕೆ.ಹೆಚ್. ಪಾಟೀಲರು ಇದನ್ನು ಒಪ್ಪಿಕೊಂಡಿದ್ದರು. ಖರ್ಗೆಯವರು ಈಗಲೂ ಕಾಲ ಮೀರಿಲ್ಲ. 50 ಸಾವಿರ ಇರುವುದನ್ನು ಕನಿಷ್ಟ ಒಂದು ಲಕ್ಷಕ್ಕೆ ಮೂರ್ನಾಲ್ಕು ಕಾರಣಗಳ ಮೇಲೆ ಏರಿಸಬೇಕಾಗುತ್ತದೆ.

ಒಂದು ರೂಪಾಯಿ ಮೌಲ್ಯ ಏನಾಗಿದೆ ಎಂದು ತರಿಸಿನೋಡಿ. ಇಲ್ಲಿ ಕೆಲಸ ಮಾಡುವ ಜವಾನನಿಗೆ 3 ಸಾವಿರ ಸಂಬಳ ಇದೆ. ಆದರೆ ಆತ ಎಲ್ಲಿಯೋ ಎರಡು ಎಕರೆ ಮೂರು ಎಕರೆ ಜಮೀನು ಕೊಳ್ಳಬೇಕೆಂದರೆ ಏಕೆ ಈ ಮಿತಿ ಹಾಕುತ್ತೀರಿ? Even now I would appeal to the Hon. Minister to reconsider to enhance it from Rs. 50,000/- to Rs. 1 lakh if you are not prepared to dispense with Section 79 A. This is all I could say.

ಮತ್ತೆ ಮುಳುಗಡೆ ಪ್ರದೇಶದಿಂದ ಬರುವ ರೈತರಿಗೆ 79ಮತ್ತು ಲ್ಯಾಂಡ್‌ರಿಫಾರ್ಮ್ಸ್ ಆಕ್ಟಿನಲ್ಲಿ ಬರುವ ಮಿತಿಗಳನ್ನು ಸಡಿಲಗೊಳಿಸಬೇಕು. Otherwise the very purpose of this amendment will not hold any water. If it were to be really conveyed the benefit should go to the people, the people who are really concerned about it, I would appeal once again to enhance it to Rs. 1 lakh. This is all I could say. Thank you.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಇದರ ಮೇಲೆ ಸಾಕಷ್ಟು ಚರ್ಚೆಯಾಗಿದೆ. ಅನೇಕ ಸದಸ್ಯರು ಈ ಮಸೂದೆಯನ್ನು ಸ್ವಾಗತ ಮಾಡಿದ್ದಾರೆ. ಕೆಲವು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವರು ಈ ಬಗ್ಗೆ ಕಟುವಾಗಿ ಹೇಳಿದ್ದಾರೆ; ಆದರಲ್ಲೂ ವಿಶೇಷವಾಗಿ ಟೆನೆಂಟ್ಸ್‌ಗೆ ಏನು ರಿಯಾಯಿತಿ ಕೊಡುತ್ತಿದ್ದೇವೆ ಅದು ಅಷ್ಟು ಅವರಿಗೆ ಲಾಭದಾಯಕವಾಗುವುದಿಲ್ಲ; ಈಗಾಗಲೇ ಹಣವಸೂಲಿ ಮಾಡಿದ್ದೀರಿ. ಕೇವಲ ಕೆಲವು ತಾಲ್ಲೂಕುಗಳ ಕೆಲವು ಗೇಣೀದಾರರಿಗೆ ಅನುಕೂಲವಾಗುವಂತಿದ್ದು ಎಲ್ಲರಿಗೂ ಅನುಕೂಲ ಆಗುವುದಿಲ್ಲವೆಂದು ಎಂಬುದು ಅವರ ವಾದ ಇದೆ. ಆದರೆ ಅವರ ಗಮನಕ್ಕೆ ನಾನು ತರುತ್ತೇನೆ ಸುಮಾರು 10 ಎಕರೆ 'ಡಿ' ಕ್ಲಾಸ್ ಭೂಮಿ ಒಳಗಡೆ ಇರುವುದರಿಂದ ಸರ್ಕಾರಕ್ಕೆ ಬರುವ ಹಣ 29ಕೋಟಿ 92ಲಕ್ಷ ರೂ.ಗಳು. ಇದರಲ್ಲಿ ಇಲ್ಲೀವರೆಗೆ ವಸೂಲಾಗಿದ್ದು ಕೇವಲ 9ಕೋಟಿ 38 ಲಕ್ಷ ಅಂದರೆ ನಾವು 20 ಕೋಟಿ ಹೆಚ್ಚೂಕಡಿಮೆ ನಾವು ಬಿಡುಗಡೆ ಮಾಡುತ್ತೇವೆ ಇದರಲ್ಲಿ ಹಿಂದಿನ ಸರ್ಕಾರ ಒಂದು ಅಮೆಂಡ್‌ಮೆಂಟ್ ತಂದು 86ರಲ್ಲಿ ಒಂದು ಕನ್‌ಸಿಷನ್ ಕೊಟ್ಟರು. ಅದರಲ್ಲಿ 7 ಕೋಟಿ 50 ಲಕ್ಷ ಮಾತ್ರ ಬಿಡುಗಡೆ ಮಾಡಿದ್ದಾರೆ. ಆದರೆ ನಾವು ಬಿಡತಕ್ಕ ಹಣ ಎಷ್ಟೆಂದರೆ

ಸುಮಾರು 30 ಕೋಟಿ ಆಗುತ್ತದೆ. ಮತ್ತು ಇನ್ನೂ 28 ಸಾವಿರ ಕೇಸ್‌ಗಳು ಪೆಂಡಿಂಗ್ ಇದೆ. ಅವುಗಳಲ್ಲಿ ಟೆನೆಂಟ್ ಪರ ಆಗುವುವು ಎಷ್ಟು ಎಂದು ಟ್ರಿಬ್ಯುನಲ್‌ನಲ್ಲಿ ತೀರ್ಮಾನ ಆದ ಮೇಲೆ ಗೊತ್ತಾಗುತ್ತದೆ. ಅವುಗಳ ಹಣ ಅಪ್ರಾಕ್ಸಿಮೇಟ್ಲಿ ಎರಡೂವರೆ ಕೋಟಿ ಆಗಬಹುದು. ಹೀಗೆ 16ರಿಂದ 17 ಕೋಟಿಯಷ್ಟು ರಿಯಾಯಿತಿಯನ್ನು ಸರ್ಕಾರದ ವತಿಯಿಂದ ನಾವು ಕೊಡುತ್ತಿದ್ದೇವೆ. ನಾವು ಎಷ್ಟೇ ಕಷ್ಟಪಟ್ಟು ಮಾತನಾಡದರೂ ಕೂಡ ಇದರ ಲಾಭ ಸ್ವಲ್ಪ ಜಾಸ್ತಿ ಆಗುವುದು ಚಂದ್ರೇಗೌಡರಿಗೆ, ಕಾಗೋಡುತಿಮ್ಮಪ್ಪನವರಿಗೆ, ಯಡಿಯೂರಪ್ಪನವರಿಗೆ ಮತ್ತು ಮುಖ್ಯಮಂತ್ರಿಗಳಿಗೆ. ದಕ್ಷಿಣ ಕನ್ನಡದಲ್ಲಿ ಸ್ವಲ್ಪ ಆಗಬಹುದು. ಅದರಲ್ಲಿ ಸ್ವಲ್ಪ ಪ್ರಾಮ್ಟಾಗಿ ಪೇಮೆಂಟಾಗಿದೆ. ನಾವು ಬಯಲುಸೀಮೆಯವರು ಹೆದರಿಕೊಂಡು ಕೊಟ್ಟುಬಿಟ್ಟಿದ್ದೇವೆ. ಆದರೂ ಕೂಡ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಇಂತಹ ಪ್ರಗತಿಪರ ಹೆಜ್ಜೆ ಇಟ್ಟಿದ್ದೇವೆ. ಅದನ್ನು ತಾವು ಸ್ವಾಗತ ಮಾಡಬೇಕು. ಶಹಭಾಷ್‌ಗಿರಿ ಕೊಡುವುದನ್ನು ಬಿಟ್ಟು ಅವರಿಗೆ ಉಪಯೋಗವಾಯಿತು, ನಮಗಾಗಲಿಲ್ಲ ಎಂದು ಹೇಳುವುದು ಸರಿಯಲ್ಲಿ, ನಮ್ಮ ಪ್ರೊ. ನಂಜುಂಡಸ್ವಾಮಿಯವರು ಹೇಳಿದರು, ಅರ್ಧ ಪ್ರಯತ್ನ ಮಾಡಿ ಇನ್ನರ್ಧ ಪ್ರಯತ್ನ ಮಾಡಿಲ್ಲವೆಂದು ; ಅವರೂ ಸ್ವಲ್ಪ ಹೇಳಿ ಸ್ವಲ್ಪ ಬಿಟ್ಟರು. 79ಎ ತರುವ ಅವಶ್ಯಕತೆ ಏನಿತ್ತು; ತಮಗೂ ಇದುಗೊತ್ತಿದೆ, ಮಾನ್ಯ ಚಂದ್ರೇಗೌಡರಿಗೂ ಗೊತ್ತಿದೆ; ಅವರೂ ನಮ್ಮ ಪಕ್ಷದಲ್ಲಿದ್ದು ಫೈಟ್ ಮಾಡಿದವರು. ಆಗ ಕಾಗೋಡು ತಿಮ್ಮಪ್ಪನವರು ನಮ್ಮ ಮುಖ್ಯಮಂತ್ರಿಗಳು ವಿರೋಧಪಕ್ಷದಲ್ಲಿದ್ದರು. ಆಗ ಇಂತಹ ಸಮಸ್ಯೆ ಬಂದಾಗ ಅವರ ಜೊತೆ ಕೂತು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಂಡಿದ್ದರಿಂದ ಇದು ಇಡೀ ದೇಶದಲ್ಲಿ ಪ್ರಗತಿಪರವಾದ ಕಾನೂನೆಂದು ಹೆಸರು ಪಡೆಯಿತು. ಅದಕ್ಕಾಗಿ 79ಎ ತರಲು ಮುಖ್ಯ ಗುರಿ ಎಂದರೆ ಒಬ್ಬರಿಗೆ ಒಂದು ಉದ್ಯೋಗ ಇರಲಿ ಎಂದು; ಮತ್ತು ಅನೇಕ ನಾನ್‌ಅಗ್ರಿಕಲ್ಚರಿಸ್ಟ್‌ಗಳು ಕಪ್ಪುಹಣವನ್ನು ಇದರಲ್ಲಿ ತೊಡಗಿಸಲು ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಇದನ್ನು ತಪ್ಪಿಸಬೇಕು ಮತ್ತು ಯಾರು ನಿಜವಾಗಿ ಗರೀಬರಿದ್ದಾರೆ, ಯಾರು ನಿಜವಾಗಿ ಭೂಮಿ ಉಳುತ್ತಾರೆ ಅಂಥವರಿಗೆ ಇದನ್ನು ರಿಟೇನ್ ಮಾಡಿಕೊಡಬೇಕೆಂಬ ಉದ್ದೇಶದಿಂದ ರಿಸ್ಟ್ರಿಕ್ಷನ್ ಹಾಕಿದ್ದು ಹಾಗೂ ಇಂತಹವರ ಜಮೀನನ್ನು ಕೈಗಾರಿಕೋದ್ಯಮಿಗಳು ತೆಗೆದುಕೊಳ್ಳಬಾರದು ಅನ್ನುವ ದೃಷ್ಟಿಯಿಂದ ಈ ಕಡಿವಾಣ ಹಾಕಿದ್ದು. ಅದಕ್ಕಾಗಿ ಅನೇಕ ಕಡೆ ಈ ವ್ಯವಸಾಯ ಭೂಮಿ ಉಳಿದಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅಗ್ರಿಕಲ್ಚರಿಸ್ಟ್‌ಗೆ ಮಾತ್ರ ಕೊಡಬೇಕು ಎನ್ನತಕ್ಕಂಥ ರೆಸ್ಟ್ರಿಕ್ಷನನ್ನು ಇಟ್ಟುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ನೀವು ಕೂಡಿಯೇ ಮಾಡಿದ ಕಾನೂನು ಇದು. ಇದರಲ್ಲಿ ತಪ್ಪಿದ್ದರೆ ಮತ್ತೆ ಸುಧಾರಣೆ ಮಾಡೋಣ. ಈಗ ಸದ್ಯಕ್ಕೆ ಇಷ್ಟರ ಮಟ್ಟಿಗೆ ತಂದಿದ್ದೇವೆ. ಇದರಲ್ಲಿ ಮತ್ತೆ ಏನಾದರೂ ಇದ್ದರೆ ತಿದ್ದುಪಡಿ ಮಾಡೋಣ. ನಮ್ಮದು ತೀರ್ಮಾನ ಮೊದಲು ಒಂದು ಲಕ್ಷ ಎಂದು ಇತ್ತು. ಆದರೆ ಚರ್ಚೆಯಾದ ಮೇಲೆ ಸದ್ಯಕ್ಕೆ 50 ಸಾವಿರ ಎಂದು ಮಾಡೋಣ, ಇದನ್ನು ನಾವು ಕೇಳದಲ್ಲೇ ತಂದಿದ್ದೇವೆ. ಈ ತಿದ್ದುಪಡಿ ನನ್ನದೇ. ನೀವು ಡ್ರಾಫ್ಟ್ ಮಾಡಿರಬಹುದು. ಇದನ್ನು ಯಾರೋ ಮಾಡಿದರೆ ಯಾರಿಗೋ ಕ್ರೆಡಿಟ್ ಎಂದು ತಾವು ಹೇಳಿದಿರಿ. ತಾವು ಮಾಡಿದಿರಿ; ಅದು ಒಳಗಡೆ ಕುಳಿತಿತ್ತು.

ಅದನ್ನು ನಾನು ತಂದು ಪುನ: ಪರಿಶೀಲಿಸಿ ಎಷ್ಟರಮಟ್ಟಿಗೆ ಇದು ಸಾಧ್ಯವಾಗುತ್ತದೆ ಎನ್ನತಕ್ಕಂಥದ್ದನ್ನು ನೋಡಿಕೊಂಡು ನಾವು ಇವತ್ತಿನ ದಿವಸ ಐವತ್ತು ಸಾವಿರ ರೂಪಾಯಿಗಳಿಗೆ ಮಾಡಿದ್ದೇವೆ. ಅದಕ್ಕೆ ತಾವು ಒಪ್ಪಬೇಕು. ಆದರೆ ವಯೋಲೇಟ್ ಮಾಡಿದಂಥ ಕೇಸ್‌ಗಳು ಎಷ್ಟಿದೆ ಎಂದು ಕೇಳಿದಿರಿ. ಇವತ್ತು ನಿಜವಾಗಿಯೂ ಈ ಕಾನೂನನ್ನು ಅನೇಕ ಜನ ವಯೋಲೇಟ್ ಮಾಡುತ್ತಿದ್ದಾರೆ. ಎಲ್ಲರೂ ಕೂಡಾ ಇದನ್ನು ಒಪ್ಪತಕ್ಕಂಥದ್ದು. ಸುಮಾರು ಎರಡು ಸಾವಿರ ಕೇಸಸ್‌ನಲ್ಲಿ ಈಗಾಗಲೇ ನೋಟೀಸನ್ನು ಇಸ್ಯೂ ಮಾಡಿದ್ದೇವೆ. ಮತ್ತು ಸುಮಾರು 306 ಕೇಸಸ್‌ಗಳು ಇರಬಹುದು. ಇದರಲ್ಲಿ ಪರ್‌ಫೀಟ್ ಆರ್ಡರ್ ಕೂಡಾ ಮಾಡಿದ್ದೇವೆ. ಆದರೆ ಇವರೆಲ್ಲರೂ ಕೂಡಾ ಇವತ್ತು ಕರ್ನಾಟಕ ಅಪಲೇಟ್ ಟ್ರಿಬ್ಯೂನಲ್‌ಗೆ ಹೋಗಿದ್ದಾರೆ. ಸ್ಟೇ ತಂದಿದ್ದಾರೆ. ಹೀಗೆ 306 ಕೇಸಸ್‌ಗಳು ಆಗಿದೆ. ಎರಡು ಸಾವಿರ ಕೇಸಸ್‌ಗಳು ಡಿಟೆಕ್ಟ್ ಆಗಿದೆ. ಅಂಡರ್ ಸೆಕ್ಷನ್ 79(ಎ) ಅದರಲ್ಲಿ ಆಕ್ಷನ್‌ನ್ನು ಇನಿಸಿಯೇಟ್ ಮಾಡಿದ್ದೇವೆ. 306 ಕೇಸಸ್‌ನಲ್ಲಿ ಆರ್ಡರ್ ಮಾಡಿ ಫರ್‌ಫೀಟ್ ಮಾಡಿದ್ದಾರೆ. ಆದರೆ ಇದರ ವಿರುದ್ಧ ಕೋರ್ಟ್‌ಗೆ ಹೋಗಿ ಸ್ಟೇಯನ್ನು ತಂದಿದ್ದಾರೆ. ಆದಕ್ಕೆ ಇದರ ಪ್ರಯೋಜನ ಅಷ್ಟರಮಟ್ಟಿಗೆ ಆಗುತ್ತಿಲ್ಲ. ಆದರೆ ಇದನ್ನು ಯಾವರೀತಿಯಾಗಿ ಚುರುಕುಗೊಳಿಸಬೇಕು ಅಥವಾ ಈ ಕಾನೂನನ್ನು ಯಾವ ರೀತಿಯಾಗಿ ನಾವು ಜಾರಿಯಲ್ಲಿ ತರಬೇಕು ಎನ್ನತಕ್ಕಂಥದ್ದರ ಬಗ್ಗೆ ಚಿಂತನೆ ಮಾಡತಕ್ಕಂಥ ಅವಶ್ಯಕತೆ ಇದೆ. ಇಲ್ಲಿದಿದ್ದರೆ ಏನು ಪ್ರಯೋಜನವಾಗುವುದಿಲ್ಲ. ತೆಗೆದು ಹಾಕಬೇಕು ಎನ್ನತಕ್ಕಂಥದ್ದು ಇದ್ದರೆ, ಒಂದು ಏನಾಗುತ್ತದೆ,ಅಂದರೆ ಇವತ್ತು ಈ ರೆಸ್ಟ್ರಿಕ್ಷನ್ ಇದೆ ಎಂದು ಹೇಳಿ ಅಟ್‌ಲೀಸ್ಟ್ ಎರಡು ಸಾವಿರಕ್ಕೆ ನಿಂತಿದೆ. ಇಲ್ಲಿದಿದ್ದರೆ ಇವತ್ತು ಲಕ್ಷಾಂತರ ಜನ ಇಲ್ಲಿಯೇ ಬೆಂಗಳೂರಿನಲ್ಲಿಯೇ ಪರ್ಚೇಸ್ ಮಾಡುತ್ತಿದ್ದರು. ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಬಹುಶಃ ಯಾರನ್ನು ಕೇಳಿದರೂ ಕೂಡಾ ಬೆಂಗಳೂರಿಗೆ ಬರುತ್ತೇವೆ ಎಂದು ಹೇಳುತ್ತಾರೆ. ರಿಟೈರ್ಡ್ ಆದವರು ಕೂಡಾ ಬರುತ್ತಾರೆ. ಇದ್ದವರು ಇಲ್ಲಿಯೇ ಇರುತ್ತೇವೆ ಎಂದು ಹೇಳುತ್ತಾರೆ. ಹೊರಗಡೆಯವರು ಇಲ್ಲಿಗೆ ಬರುತ್ತಾರೆ. ಲಾ ಅಂಡ್ ಆರ್ಡರ್ ದೃಷ್ಟಿಯಿಂದಲೂ ಕೂಡಾ ಬಹಳ ಜನ ಇಲ್ಲಿಯೇ ಪ್ರಿಫರ್ ಮಾಡುತ್ತಾರೆ. ಕಲ್ಕತ್ತದಲ್ಲಿ ಗಲಾಟೆ, ಪಂಜಾಬ್‌ನಲ್ಲಿ ಗಲಾಟೆ, ಹೈದರಾಬಾದ್‌ನಲ್ಲಿ ಗಲಾಟೆ, ಬೆಂಗಳೂರಿನಲ್ಲಿಯೇ ವಾಸಿ ಎಂದು ಅನೇಕ ಜನ ಇಲ್ಲಿಗೆ ಬರುತ್ತಾರೆ.

ಶ್ರೀ ಹೆಚ್. ಏಕಾಂತಯ್ಯ : ನಾವು ಅವರನ್ನು ಇಲ್ಲಿಗೆ ಬರದ ಹಾಗೆ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ರೆಸ್ಟ್ರಿಕ್ಟ್ ಮಾಡೋಣ. ಈಗ ಇದರಿಂದಾಗಿಯೂ ಕೂಡಾ ಒಂದು ತೊಂದರೆಯಿದೆ.

ಶ್ರೀ ಹೆಚ್. ಏಕಾಂತಯ್ಯ : ಲಾ ಅಂಡ್ ಆರ್ಡರ್ ಇಲ್ಲಿಯೂ ಅದೇ ರೀತಿ ಆಗಬೇಕು ಎಂತಲೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಅಪ್ರಿಸಿಯೇಷನ್ ಮಾಡಬೇಕು. ಯಾವುದೇ ಸರ್ಕಾರ ಇದ್ದರೂ ಕೂಡಾ ಇಲ್ಲಿ ಒಂದು ಪದ್ಧತಿಯಿಂದ ನಡೆದುಕೊಂಡು ಬಂದಿದೆ. ಅದರಿಂದ ಒಂದು.....

Sri. S.H. KOUJALAGI ; He must be the resident of Karnataka ಎಂದು ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ನಮ್ಮ ನಂಜುಂಡಸ್ವಾಮಿಯವರು ಹೇಳಿದರು. You are violating the Constitution ಎಂದು, ಅದಕ್ಕೆ 19 (ಎ) ಕಾನೂನಿಗೆ ವಿರುದ್ಧ ಇದೆ, ಕಾನ್ಸ್‌ಟಿಟ್ಯೂಷನ್‌ಗೆ ವಿರುದ್ಧ ಇದೆ ಎನ್ನತಕ್ಕಂಥ ವಾದವನ್ನು ಅವರು ಮಂಡಿಸಿದರು. ಆದರೂ ಕೂಡಾ ಇದುವರೆಗೂ ಇದು ಸ್ಟ್ರೈಕ್ ಡೌನ್ ಆಗಲಿಲ್ಲ. ಇನ್ನೂ ಇದೆ. ಇನ್ನೂ ಜೀವಂತ ಇದೆ. ನೋಡೋಣ. ಆಮೇಲೆ ಇದನ್ನು ಎಕ್ಸಾಮಿನೇಷನ್ ಮಾಡಿ ಮುಂದೆ ಅಂಥದ್ದು ಏನಾದರೂ ಸುಪ್ರೀಂಕೋರ್ಟ್‌ನಿಂದ ಏನಾದರೂ ಆದೇಶ ಬಂದರೆ ಪುನಃ ಪರಿಶೀಲನೆಯನ್ನು ಮಾಡೋಣ. ಸದ್ಯಕ್ಕೆ ಜೀವಂತ ಇದೆ. ಈಗ ತೊಂದರೆಗೆ ಈಡಾಗದಂಥ ದೃಷ್ಟಿಯಿಂದ ನಡೆದಿದೆ. ಇಷ್ಟು ಮಾತ್ರ ಹೇಳಿ ಎಲ್ಲವನ್ನೂ ಕೂಡಾ ಈಗಾಗಲೇ ನಾನು ಕೆಲವು ಸೂಚನೆಗಳನ್ನು ತೆಗೆದುಕೊಂಡಿದ್ದೇನೆ ಮತ್ತು ಕೆಲವು ವಿಷಯಗಳ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಕೌಜಲಗಿಯವರು, ದೇಶಪಾಂಡೆಯವರು ಯಾವ ಯಾವ ಸೆಕ್ಷನ್‌ಗಳಲ್ಲಿ ಪುನರ್‌ಪರಿಶೀಲಿಸಬೇಕು ಅಥವಾ ಅದರ ಬಗ್ಗೆ ಚಿಂತನೆಯನ್ನು ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಹೇಳಿದ್ದಾರೆ, ಅದನ್ನೂ ಕೂಡಾ ಕೆಲವು ಸೆಕ್ಷನ್‌ಗಳನ್ನು ಲಾ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿ ಅದರಲ್ಲಿ ಯಾವ ರೀತಿಯಾದ ಕ್ರಮವನ್ನು ತೆಗೆದುಕೊಳ್ಳಬಹುದು ಅಥವಾ ಸಹಾಯವನ್ನು ಮಾಡಬಹುದು ಎಂಬುದನ್ನು ನೋಡುತ್ತೇನೆ. Hindu succession ಆಕ್ಟ್ ಪ್ರಕಾರ ತಾವು ಹೇಳಿದಿರಿ, ಪೇರೆಂಟ್ಸ್ ಅಂದರೆ ತಂದೆ ತಾಯಿಗಳ ಜಮೀನುಗಳು ಮುಂದೆ ಮಕ್ಕಳಿಗೇ ಆಗುವುದಿಲ್ಲ, ಅಂಥ ಒಂದು ಪರಿಸ್ಥಿತಿ ಇದೆ ಎನ್ನತಕ್ಕಂಥದ್ದನ್ನು ಹೇಳಿದಿರಿ, ಇನ್ನೊಂದು ಏನು ಹೇಳಿದಿರಿ; ಫ್ಯಾಮಿಲಿಗಳ ಬಗ್ಗೆ ಹೇಳಿದಿರಿ, ಜಾಯಿಂಟ್ ಫ್ಯಾಮಿಲಿ ಇದ್ದರೆ ಈ ಪ್ರಶ್ನೆ ಬರುವುದಿಲ್ಲ. ಫ್ಯಾಮಿಲಿ ಡೆಫನೀಷನನ್ನು ನಾವು ಕೊಟ್ಟಿದ್ದೇವೆ - Husband, wife and 2 minor children ಎನ್ನತಕ್ಕಂಥದ್ದು ಇದರಲ್ಲಿ ಇದೆ. ಅದಕ್ಕೆ ಪುನಃ ಫ್ಯಾಮಿಲಿಗೆ ಹೊಸ ಡೆಫನೀಷನನ್ನು ಕೊಡತಕ್ಕಂಥ ಅವಶ್ಯಕತೆ ಇಲ್ಲ. ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ಫ್ಯಾಮಿಲಿ ಡೆಫನೀಷನ್ ಏನು ಇದೆ, ಅದರ ಪ್ರಕಾರ ಇನ್‌ಕಂ ಕೂಡಾ ಕೌಂಟ್ ಆಗಿದೆ. ಅದಕ್ಕಾಗಿ ಇಲ್ಲಿ ಎಂಟೈರ್ ಜಾಯಿಂಟ್ ಫ್ಯಾಮಿಲಿಯಲ್ಲಿ ಕೌಂಟ್ ಆಗತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. ಈಗ ಸದ್ಯಕ್ಕೆ ಇರತಕ್ಕದ್ದು ಅನೇಕ ರೈತರಿಗೆ ಅನುಕೂಲವಾಗತಕ್ಕ ಒಂದು ತಿದ್ದುಪಡಿ ಇದೆ. ವಿಶೇಷವಾಗಿ ನಮ್ಮ ಸೈನಿಕರುಗಳಿಗೆ ಸಹಾಯ ಮಾಡತಕ್ಕದ್ದು ಇದರಲ್ಲಿ ಇದೆ. ಇದೆಲ್ಲವನ್ನು ತಾವು ಒಪ್ಪಿದ್ದೀರಿ. ಈಗಾಗಲೇ ಒಮ್ಮತದಿಂದ ಒಪ್ಪಿದ್ದೀರಿ ಅದರ ಬಗ್ಗೆ ಮತ್ತೊಮ್ಮೆ ಕೇಳಿಕೊಳ್ಳಬೇಕಾಗಿಲ್ಲ. ಆದರೂ ಕೂಡ ನಾನು ಅಭಿನಂದಿಸುತ್ತೇನೆ. ಏಕೆಂದರೆ ನಾಲ್ಕು ತಿದ್ದುಪಡಿಗಳಿಗೆ ಎಲ್ಲರೂ ಒಮ್ಮತದಿಂದ ಬೆಂಬಲವನ್ನು ಕೊಟ್ಟಿದ್ದಕ್ಕಾಗಿ ತಮ್ಮೆಲ್ಲರನ್ನೂ ಅಭಿನಂದಿಸಿ ಪುನಃ ಇದನ್ನು ಒಮ್ಮತದಿಂದ ಪಾಸ್ ಮಾಡಬೇಕೆಂದು ತಮಗೆ ಪುನಃ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

1990ನೇ ಇಸವಿಯ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕ

ಉಪಾಧ್ಯಕ್ಷಣಿಯವರು : "ಪ್ರಸ್ತಾವ ಏನೆಂದರೆ 1990ನೇ ಇಸವಿಯ ಕರ್ನಾಟಕ ಭೂ ಸುಧಾರಣಾ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

"ಪ್ರಸ್ತಾವ ಅಂಗೀಕರಿಸಲ್ಪಟ್ಟಿತು"

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು